(ಇ) ವಿಧಾನ ಸಭೆಯ ಅಧ್ಯಕ್ಷರಿಂದ ಸಮಿತಿಗೆ ಒಪ್ಪಿಸಿರುವ ರೇಷ್ಮೆ ಉದ್ದಿಮೆಗಳಲ್ಲಿ ಸತತವಾಗಿ ಉಂಟಾಗುತ್ತಿರುವ ನಷ್ಟದ ವಿಷಯವೂ ಸೇರಿದಂತೆ, ವಾಣಿಜ್ಯ ಹಾಗೂ ಕೈಗಾರಿಕೆ ಇಲಾಖೆಗಳಿಗೆ ಸಂಬಂಧಿಸಿದಂತೆ ೧೯೭೫-೭೬ ರಿಂದ ೧೯೮೦-೮೧ನೇ ಸಾಲುಗಳ (ಸಿವಿಲ್ ಹಾಗೂ ರಾಜಸ್ವ) ಹಣ ವಿನಿಯೋಗ ಹಾಗೂ ವಿತ್ತೀಯ ಲೆಕ್ಕಗಳ ಬಗ್ಗೆ ಸಾರ್ವಜನಿಕ ಲೆಕ್ಕ ಪತ್ರ ಸಮಿತಿಯ ೧೭ನೇ ವರದಿ,

(ಈ) ಸಾರ್ವಜನಿಕ ಉದ್ದಿಮೆಗಳ ಸಮಿತಿಯ ಅಧ್ಯಕ್ಷರು ೩ನೇ ಡಿಸೆಂಬರ್ ೮೨ ರಂದು ವಿಧಾನ ಸಭಾ ಅಧ್ಯಕ್ಷರಿಗೆ ಸಲ್ಲಿಸಿದ ೧೯೭೩-೭೪ ರಿಂದ ೧೯೭೭-೭೮ನೇ ಸಾಲುಗಳಿಗೆ ಸಂಬಂಧಿಸಿದಂತೆ, ಭಾರತ ನಿಯಂತ್ರಕ ಮಹಾಲೇಖಾ ಪರೀಕ್ಷಕರ ವರದಿಯ ಮೇರೆಗೆ ಕರ್ನಾಟಕ ವಿದ್ಯುತ್ ನಿಗಮ (ರಿ)ದ ಬಗ್ಗೆ ಸಾರ್ವಜನಿಕ ಉದ್ದಿಮೆಗಳ ಸಮಿತಿಯ ೧೭ನೇ ವರದಿ.

ಅಧ್ಯಕ್ಷರು.—ಕಾಗದ ಪತ್ರಗಳನ್ನು ಸಭೆಯ ಮುಂದಿಡಲಾಗಿದೆ.

ಮನವಿಗಳು

ವೈಟ್‌ಫೀಲ್ಡ್‌ನಲ್ಲಿರುವ ರಾವ್ ಇನ್ಸ್‌ಲೇಟಿಂಗ್ ಕಂಪನಿಯಲ್ಲಿ ನಡೆದ ದುರ್ಘಟನೆಯ ಬಗ್ಗೆ.

ಶ್ರೀ ಎಂ. ವೀರಪ್ಪಮೊಯ್ಲಿ.—ಮಾನ್ಯ ಸಭಾಧ್ಯಕ್ಷರೇ, ಮುಂದೆ ಕಾಣಿಸಿದಂಥ ವಿಷಯಕ್ಕೆ ಹೋಗುವುದಕ್ಕೆ ಮುಂಚೆ ಒಂದು ವಿಷಯವನ್ನು ಪ್ರಸ್ತಾಪ ಮಾಡಬೇಕಾಗಿದೆ. ನಾನು ಮತ್ತು ನನ್ನ ಸಹದ್ಯೋಗಿಗಳು ವೈಟ್‌ಫೀಲ್ಡ್‌ನಲ್ಲಿರುವ ರಾವ್ ಇನ್ಸ್‌ಲೇಟಿಂಗ್ ಕಂಪನಿಯಲ್ಲಿ ನಡೆದ ದುರ್ಘಟನೆಯ ಬಗ್ಗೆ ಗಮನ ಸೆಳೆಯುವ ನೋಟೀಸನ್ನು ಕೊಟ್ಟಿದ್ದೆವು ಅದು ಇವತ್ತಿನ ಕಾರ್ಯಕ್ರಮದಲ್ಲಿ ಬಂದಿಲ್ಲ. ಇದು ಬಹಳ ಮುಖ್ಯವಾದಂಥ ಪ್ರಶ್ನೆ, ಇದರಲ್ಲಿ ಕಾನೂನು ವ್ಯವಸ್ಥೆ ಅಡಕವಾಗಿರುವುದರಿಂದ ಸರ್ಕಾರ ಆ ಬಗ್ಗೆ ಮಾಹಿತಿಯನ್ನು ಪಡೆದು ಉತ್ತರ ಕೊಡಬೇಕಾಗುತ್ತದೆ. ಬೆಂಗಳೂರಿನಲ್ಲಿ ಮಾತ್ರವಲ್ಲ, ಇಡೀ ರಾಜ್ಯದಲ್ಲಿ ಜನತೆಯ ಆಸ್ತಿಪಾಸ್ತಿ ರಕ್ಷಣೆಯ ಜವಾಬ್ದಾರಿ ಯಾರು ಮಾಡುತ್ತಾರೆ.....

ಅಧ್ಯಕ್ಷರು.—ಹೊಸ ನಿಯಮಾವಳಿಗಳ ಪ್ರಕಾರ ಎರಡು ಗಮನ ಸೆಳೆಯುವ ಸೂಚನೆಗಳನ್ನು ಮಾತ್ರ ತೆಗೆದುಕೊಳ್ಳಬೇಕೆಂದು ತೀರ್ಮಾನ ಮಾಡಿದೆ. ಸಂಸದೀಯ ವ್ಯವಹಾರಗಳ ಬಗ್ಗೆ ವಿಶೇಷವಾಗಿ ಮಾರ್ಗದರ್ಶನ ಮಾಡಬೇಕಾದವರು ತಾವು, ತಮ್ಮ ನೋಟೀಸ್ ನನಗೆ ಬಂದಿದೆ. ಪರಿಶೀಲನೆ ಮಾಡುತ್ತೇನೆ.

ಶ್ರೀ ಎಂ. ವೀರಪ್ಪಮೊಯ್ಲಿ.— ಕಾನೂನು ದೃಷ್ಟಿಯಲ್ಲಿ ನಾನು ಆಕ್ಷೇಪಣೆ ಎತ್ತುತ್ತಿಲ್ಲ. ಲೋಪವನ್ನು ಎತ್ತಿ ಆಡುತ್ತಿಲ್ಲ. ಗಂಭೀರವಾದಂಥ ಪ್ರಶ್ನೆ ಇರುವುದರಿಂದ ತಮ್ಮ ಅನುಮತಿಯನ್ನು ಕೇಳುತ್ತಿದ್ದೇನೆ.

ಅಧ್ಯಕ್ಷರು.—ನಾನು ಗಂಭೀರತೆಯ ಬಗ್ಗೆ ಪ್ರಶ್ನೆ ಮಾಡುವುದಿಲ್ಲ. ಸರ್ಕಾರದವರು ತಯಾರಾಗಿದ್ದರೆ ವಿಷಯ ಪ್ರಸ್ತಾಪ ಮಾಡಿ.

ಶ್ರೀ ಎಂ. ವೀರಪ್ಪಮೊಯ್ಲಿ.—ನಾನು ಇಂಥ ನಡೆಯಬೇಕಾದ ಕಾರ್ಯಕಲಾಪಕ್ಕೆ ಅಡ್ಡಿ ಬರುವುದಿಲ್ಲ, ಸರ್ಕಾರದ ಗಮನಕ್ಕೆ ತರುವುದು ನಮ್ಮ ಕರ್ತವ್ಯ ಇದೆ. ಇವತ್ತು ಸಾರ್ವಜನಿಕರಲ್ಲಿ ಭಯ, ಭೀತಿ, ಶಂಕೆ ಇದೆ. ಜನರ ಆಸ್ತಿಪಾಸ್ತಿಗಳನ್ನು ಈ ಸರ್ಕಾರ ಸಂರಕ್ಷಣೆ ಮಾಡುತ್ತದೆಯೋ ಇಲ್ಲವೋ ಎನ್ನುವ ಶಂಕೆ ಇದೆ. ನನಗೆ ಈ ಪ್ರಶ್ನೆಯನ್ನು ಇಂದು ಎತ್ತಬಾರದೆನ್ನುವ ಮನಸ್ಸು ಇತ್ತು. ಕಾರಣ, ಸರ್ಕಾರಕ್ಕೆ ಅಡಳಿತದ ಗ್ರಿಪ್ ಸಿಗಬೇಕಾಗಿದೆ, ಇನ್ನು ಕಾಲಾವಕಾಶ ಬೇಕಾಗಿದೆ, ಎಲ್ಲವನ್ನೂ ಬೆಳಗಾಗುವುದರೊಳಗಾಗಿ ಮಾಡುತ್ತೀರೆಂದು ನಾವು ನಿರೀಕ್ಷೆ ಮಾಡುವುದಿಲ್ಲ. ೧೯ನೇ ತಾರೀಖು ರಾವ್ ಇನ್ಸ್‌ಲೇಟಿಂಗ್ ಕಂಪನಿಯವರಿಗೆ ಬೆದರಿಕೆ ಬಂದಿದೆ, ೨೧ನೇ ತಾರೀಖು ಈ ಘಟನೆ ನಡೆದಿದೆ. ಸಿ.ಪಿ.ಎಂ. ಬೆಂಬಲದಿಂದ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದಿದೆ, ಸಿಪಿಐಯು ವರ್ಕರ್ಸ್.....

ಅಧ್ಯಕ್ಷರು.—ತಾವು ಸರ್ಕಾರದ ಗಮನ ಸೆಳೆದಿದ್ದೀರಿ, ವಿಚಾರ ಮಾಡುತ್ತೇವೆ. ತಾವು ನಿಲುವಳಿ ಸೂಚನೆ ರೂಪದಲ್ಲಿ ತಂದಿದ್ದರೆ.....

SRI M. VEERAPPA MOILY.—I have not narrated the incident fully. Let me tell the House as to what has actually happened in Whitefield.

ಶ್ರೀ ಎಂ. ರಘುಪತಿ.—ಮಾನ್ಯ ಅಧ್ಯಕ್ಷರೇ, ನನ್ನದೊಂದು ಕ್ರಿಯಾಲೋಪ.

SRI M. VEERAPPA MOILY.—I have been permitted by the Chair.

ಶ್ರೀ ಎಂ. ರಘುಪತಿ.—ಸ್ವಾಮಿ, ಕ್ರಿಯಾಲೋಪವನ್ನು ಯಾವಾಗ ಬೇಕಾದರೂ ಎತ್ತಬಹುದು. ತಾವು ಈ ಮನೆಯ ನಡವಳಿಕೆ ಪುಸ್ತಕವನ್ನು ಓದಿದ್ದೀರಾ ?

SRI M. VEERAPPA MOILY.—How can the Hon. Member raise a point of order when there is a vaccum.

ಶ್ರೀ ಎಂ ರಘುಪತಿ.—ಕ್ರಿಯಾಲೋಪವನ್ನು ಯಾವ ಸಂದರ್ಭದಲ್ಲಿ ಬೇಕಾದರೂ ಎತ್ತಬಹುದು. ಇಂಗ್ಲೀಷಿನಲ್ಲಿ ಹೇಳಿದರೆ ಅರ್ಥವಾಗುತ್ತೆ ಅಂತ ಕಾಣುತ್ತೆ.

ಶ್ರೀ ಎಸ್. ಸೂರ್ಯನಾರಾಯಣ ರಾವ್.—ಆಸ್ಪತ್ರೆಯಲ್ಲಿ ಕಾರ್ಮಿಕರು ಸಾಯುತ್ತಿದ್ದಾರೆ.

MR. SPEAKER.—Hon'ble Member Sri M. Raghupathi has raised a point of order. Let us hear.

ಶ್ರೀ ಎಂ ರಘುಪತಿ.— ಅಧ್ಯಕ್ಷರೆ, ನಾನು ಕ್ರಿಯಾಲೋಪ ಎತ್ತಿದ್ದೇನೆ. ನನ್ನ ಕ್ರಿಯಾಲೋಪ ಇಷ್ಟೇ, ತಾವು ನಿಯಮಾವಳಿ ಪ್ರಕಾರ ಎರಡು ನಿಲುವಳಿ ಸೂಚನೆಗಳನ್ನು ಗುರುತು ಮಾಡಿ ಅನುಮತಿ ಕೊಟ್ಟಿದ್ದೀರಿ. ಆ ಪ್ರಕಾರ ಆ ನಿಲುವಳಿ ಸೂಚನೆಗಳ ಬಗ್ಗೆ ಚರ್ಚೆ ಮಾಡಬಹುದು. ಮಾನ್ಯ ಸದಸ್ಯರು ಅಡ್ಜರ್ನ್‌ಮೆಂಟ್ ಮೋಷನ್ ಮೂವ್ ಮಾಡಬಹುದಿತ್ತು. ಕಾನೂನು ಪ್ರಕಾರ ಶೂನ್ಯ ವೇಳೆ ಇಲ್ಲ, ಅದು ಬೇಡ ಎಂದು ತೆಗೆದುಹಾಕಿದವರು ರಾಮಕೃಷ್ಣ ಅವರು, ನಾವು ಕೂಡ ಒಂದು ನೋಟೀಸ್ ಕೊಟ್ಟಿದ್ದೇವೆ, ನಾವು ಸಹ ಚರ್ಚೆಯಲ್ಲಿ ಪಾಲ್ಗೊಳ್ಳಬೇಕಾಗಿದೆ. ಇದರ ಬಗ್ಗೆ ವ್ಯಾಪಕವಾಗಿ ಚರ್ಚೆ ಮಾಡಲಿಕ್ಕೆ ಅವಕಾಶವಿದೆಯೇ ? ಮಾನ್ಯ ಸದಸ್ಯರು ಹೇಳತಕ್ಕ ವಿಚಾರ ಅಜೆಂಡಾದಲ್ಲಿ ಬಂದಿಲ್ಲ. ಅದು ಅಡ್ಜರ್ನ್‌ಮೆಂಟ್ ಮೋಷನ್ ಅಲ್ಲ. ಆದ್ದರಿಂದ ಮಾನ್ಯ ಅಧ್ಯಕ್ಷರು ಇವೊತ್ತು ಏನು ಸಂಪ್ರದಾಯ ಹಾಕಿಕೊಡ್ತೀರಾ ಅದು ಮುಂದಿನ ಐದು ವರ್ಷಗಳಿಗೆ ಮಾದರಿಯಾಗುತ್ತದೆ. ಈ ಸಂಪ್ರದಾಯವನ್ನು ಇವೊತ್ತು ಉಲ್ಲಂಘನೆ ಮಾಡಿದರೆ ಇನ್ನು ಮುಂದೆ ಐದು ವರ್ಷಗಳ ಕಾಲ ಪರಿಪಾಠವಾಗಿ ನಡೆಯುತ್ತದೆ. ಈ ಬಗ್ಗೆ ಚರ್ಚೆ ಮಾಡಲಿಕ್ಕೆ ನಾನು ಬೇಡ ಎಂದು ಹೇಳುವುದಿಲ್ಲ. ನಿಯಮಾವಳಿ ಪ್ರಕಾರ ವಿಚಾರವನ್ನು ತಂದು ಚರ್ಚೆ ಮಾಡಬಹುದು. ಮಾನ್ಯ ಅಧ್ಯಕ್ಷರು ಈ ಸಂದರ್ಭದಲ್ಲಿ ಸರಿಯಾದ ರೂಲಿಂಗ್ ಕೊಡದೇ ಇದ್ದರೆ ಮುಂದಿನ ಸಭೆಯ ಕಾರ್ಯಕಲಾಪಗಳಿಗೆ ತೊಂದರೆಯಾಗುತ್ತದೆಂದು ನನ್ನ ಅಭಿಪ್ರಾಯ.

MR. SPEAKER.— I have already received notices from the hon. Members. I have permitted the Hon. Leader of Opposition to say something.

ಶ್ರೀ ಎಂ. ವೀರಪ್ಪಮೊಯಿಲಿ.— ಅಧ್ಯಕ್ಷರೆ, ವೈಟ್‌ಫೀಲ್ಡ್‌ನಲ್ಲಿ ಸಿಐಟಿಯು ವರ್ಕರ್ಸ್ ನಾವು ೨೧ನೇ ತಾರೀಖು ಬೆಳಿಗ್ಗೆ ೭ ಗಂಟೆಗೆ ಬರುತ್ತೇವೆ. ಸಿಪಿಐ ಪಕ್ಷದ ಒಂದು ಬೆಂಬಲದಿಂದ ಈಗಿನ ಸರ್ಕಾರ ಇದೆ, ಪೋಲೀಸರು ಲಾಠಿ ಎತ್ತುವ ಹಾಗೆ ಇಲ್ಲ, ನಾವೇ ನಮ್ಮ ಲಾಠಿ ತಂದು ಇಲ್ಲಿ ಸದೆಬಡಿಯುತ್ತೇವೆಂದು ಹೇಳಿ ಬೆದರಿಕೆ ಹಾಕಿ ಹೋದರು. ಆ ಫ್ಯಾಕ್ಟರಿಯವರು ಸನ್ಮಾನ್ಯ ಸಂಬಂಧಿಕ ಮಂತ್ರಿಯವರಿಗೆ ಮತ್ತು ಅದಕ್ಕೆ ಸಂಬಂಧಪಟ್ಟ ಅಧಿಕಾರಿಗಳಿಗೆಲ್ಲಾ ದೂರನ್ನು ಕೊಟ್ಟರು. ಅವರು ೨೧ನೇ ತಾರೀಖು ಬೆಳಿಗ್ಗೆ ೭ ಗಂಟೆಗೆ ಬರಲಿಲ್ಲ. ೨೧ನೇ ತಾರೀಖು ಬೆಳಿಗ್ಗೆ ೭ ಗಂಟೆಗೆ ಬಂದರು. ಆ ಸಂದರ್ಭದಲ್ಲಿ ಕೆಎಸ್‌ಆರ್‌ಟಿ ರಿಸರ್ವ್ ವ್ಯಾನ್ ಒಂದನ್ನು ಅಲ್ಲಿಗೆ ಕಳುಹಿಸಿಕೊಟ್ಟಿದ್ದಾರೆ. ಬೆಳಿಗ್ಗೆ ೭ ಗಂಟೆಯಿಂದ ರಾತ್ರಿಯವರೆಗೆ ಸತತವಾಗಿ ಅವ್ಯಾಹತವಾಗಿ, ದೌರ್ಜನ್ಯ ದಬ್ಬಾಳಿಕೆ, ಅನೇಕ ಜನರ ತಲೆಬುರುಡೆಗಳನ್ನು ಒಡಿದರು. ಅನೇಕ ಜನ ಆಸ್ಪತ್ರೆಯಲ್ಲಿ ಗಂಭೀರ ಪರಿಸ್ಥಿತಿಯಲ್ಲಿದ್ದಾರೆ. ಸುಮಾರು ಒಂದೂವರೆ ಕೋಟಿ ರೂಪಾಯಿಗಳಷ್ಟು ಆಸ್ತಿಪಾಸ್ತಿಯನ್ನು ಸುಟ್ಟುಹಾಕಿದ್ದಾರೆ. ಅಲ್ಲಿಗೆ ಡಿ.ಐ.ಜಿ. ಅವರು ಬಂದು ನೋಡಿ

ದ್ದಾರೆ. ಎಸ್. ಪಿ. ಅವರು ಬಂದು ನೋಡಿದ್ದಾರೆ, ಅನೇಕ ಜನ ಪೋಲೀಸ್ ಅಧಿಕಾರಿಗಳು ಬಂದು ಹೋಗಿದ್ದಾರೆ. ಕೆಲವು ಪೋಲೀಸ್ ಅಧಿಕಾರಿಗಳಿಗೆ ಏಟು ಸಹ ಬಿದ್ದಿದೆ. ಆದರೆ ಗಲಬೆ ನಿಲ್ಲಿಸತಕ್ಕ ಪ್ರಯತ್ನವನ್ನು ಪೋಲೀಸರು ಮಾಡಲಿಲ್ಲ. ಬಹುಶಃ ಅವರಿಗೆ ನೀವು ಏನೂ ಮಾಡಬೇಡಿ. ಇದೇ ತರಹ ಮುಂದುವರಿಸಿಕೊಂಡು ಹೋಗಲಿ ಎನ್ನುವ ಅಭಿಪ್ರಾಯ ತಮ್ಮದು ಅಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ಅನೇಕ ಅನುಭವದ ಮುಖ್ಯಮಂತ್ರಿಗಳು ತಾವಾಗಿದ್ದೀರಿ. ಅನುಭವಿ ಮಂತ್ರಿಗಳು ನಿಮ್ಮ ಸರ್ಕಾರದಲ್ಲಿದ್ದಾರೆ. ಅಲ್ಲಿ ನಡೆದಿರತಕ್ಕ ಗಲಾಟೆಯಲ್ಲಿ ಹೆಂಗಸರ ಮಾನ ಹಾನಿ ಕೂಡ ಆಗಿದೆ. ಸುಮಾರು ೨೫ ಮನೆಗಳನ್ನು ಪ್ರವೇಶ ಮಾಡಿ ಮನೆಗಳಲ್ಲಿ ಏನಿದೆ ಅದನ್ನೆಲ್ಲಾ ದೋಚಿಕೊಂಡು ಹೋಗಿದ್ದಾರೆ. ಈ ರೀತಿ ದೌರ್ಜನ್ಯ ನಡೆಯುವಂಥ ಸಂದರ್ಭದಲ್ಲಿ ಪೋಲೀಸರಿಗೆ ತಾವು ಕೈ ಎತ್ತಬೇಡಿ ಎನ್ನುವ ಆದೇಶ ಕೊಟ್ಟಿದ್ದರೆ ಬಹುಶಃ ಇಲ್ಲಿ ಯಾವ ಕೈಗಾರಿಕೆಗಳು ನಡೆಯಲಿಕ್ಕೆ ಆಗುವುದಿಲ್ಲ.

ಶ್ರೀ ಹೆಚ್. ಡಿ. ದೇವೇಗೌಡ.— ತಮಗೆ ಏನು ಇನ್‌ಫರ್‌ಮೇಷನ್ ಬಂದಿದೆ ತಿಳಿಸಿ,

ಶ್ರೀ ಎಂ. ವೀರಪ್ಪ ಮೊಯಿಲಿ.—ಇನ್‌ಫರ್‌ಮೇಷನ್ ನಮಗೆ ಬರಬೇಕಾಗಿಲ್ಲ. ಈ ರೀತಿ ಮಾಹಿತಿ ಇದೆ. ೧೯ನೇ ತಾರೀಖು ದೌರ್ಜನ್ಯ ನಡೆಯತಕ್ಕದ್ದನ್ನು ತಡೆಯಬೇಕೆಂದು ಕೊಟ್ಟರೂ ಸಹ. ಡಿಐಜಿ ಮತ್ತು ಅತ್ಯಂತ ಉನ್ನತ ಪೋಲೀಸ್ ಅಧಿಕಾರಿಗಳು, ಲೇಬರ್ ಕಮಿಷನರ್ ಅವರು ಬೆಳಿಗ್ಗೆಯಿಂದ ಸಂಜೆಯವರೆಗೂ ಅಲ್ಲೇ ಇದ್ದರೂ ಸಹ ದೌರ್ಜನ್ಯ ನಡೆಯುವುದನ್ನು ನಿಲ್ಲಿಸಲಿಕ್ಕೆ ಯಾರಿಗೂ ಸಾಧ್ಯವಾಗಿಲ್ಲ. ಸಾರ್ವಜನಿಕ ಆಸ್ತಿಪಾಸ್ತಿ, ಮಾನ ಹಾನಿ, ಪ್ರಾಣಕ್ಕೆ ಭೀತಿಯನ್ನು ತರತಕ್ಕಂಥ ವಾತಾವರಣ ಉಂಟಾಗಿದೆ. ದೌರ್ಜನ್ಯ ನಡೆದರೂ ಸಹ ಪೋಲೀಸರು ಲಾಠಿಯನ್ನು ಎತ್ತಬಾರದು ಎಂದು ಹೇಳತಕ್ಕ ಮಾತುಗಳು ಏನಾದರೂ ನಡೆದಿದ್ದರೆ ಬಹುಶಃ ನಮ್ಮ ಕರ್ನಾಟಕ ರಾಜ್ಯವನ್ನು ದೇವರೇ ರಕ್ಷಿಸಬೇಕೆಂದು ಕಾಣುತ್ತದೆ. ಅಲ್ಲಿ ಸುಮಾರು ಒಂದೂವರೆ ಕೋಟಿ ರೂಪಾಯಿ ನಷ್ಟವಾಗಿದೆ.

(ಗೊಂದಲ)

ಸರ್ಕಾರಕ್ಕೆ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ, ಕರ್ನಾಟಕ ರಾಜ್ಯದಲ್ಲಿರತಕ್ಕ ಸಾರ್ವಜನಿಕರ ಆಸ್ತಿಪಾಸ್ತಿಗಳ ಬಗ್ಗೆ ರಕ್ಷಣೆ ಒದಗಿಸುವಂಥ ವ್ಯವಸ್ಥೆ ಮಾಡಬೇಕು.

(ಗೊಂದಲ)

ಶ್ರೀ ಎಸ್. ಸೂರ್ಯನಾರಾಯಣ ರಾವ್.— ಅಧ್ಯಕ್ಷರೆ, ಈಗ ಮಾನ್ಯ ಸದಸ್ಯರಾದ ಮೊಯಿಲಿಯವರು ಸಾರ್ವಜನಿಕರ ಆಸ್ತಿಪಾಸ್ತಿಗಳ ಬಗ್ಗೆ ಜನಗಳ ಹಿತರಕ್ಷಣೆಯ ಬಗ್ಗೆ ಮಾತನಾಡಿದ್ದಾರೆ ಬಹಳ ಸಂತೋಷ. ಅವರಿಗೆ ವಿರೋಧ ಪಕ್ಷಕ್ಕೆ ಬಂದಮೇಲೆ ಇದು ಜ್ಞಾಪಕಕ್ಕೆ ಬಂದದ್ದು ನಮಗೆಲ್ಲಾ ಸಂತೋಷವಾಗಿದೆ. ೭ ತಿಂಗಳ ಹಿಂದೆ * ಗೂಂಡಾ ಗ್ಯಾಂಗ್ ಹೋಗಿ.....

(ಗೊಂದಲ)

ಶ್ರೀ ಧರ್ಮಸಿಂಗ್.— ಅಧ್ಯಕ್ಷರೆ, ಯಾರೂ ಈ ಸಭೆಯಲ್ಲಿ ಇಲ್ಲ ಅವರ ಬಗ್ಗೆ ಮಾತನಾಡಲಿಕ್ಕೆ ಹಕ್ಕು ಇಲ್ಲ. ಅವರು ಹೇಳಿದ ಹೆಸರಿನವರು ಈ ಮನೆಯ ಸದಸ್ಯರಲ್ಲ. ಆದ್ದರಿಂದ, ಅವರ ಬಗ್ಗೆ ಮಾತನಾಡುವುದು ಸರಿಯಲ್ಲ.

(ಗೊಂದಲ)

ಅಧ್ಯಕ್ಷರು.— ಈ ಮನೆಯಲ್ಲಿ ಸದಸ್ಯರಲ್ಲದವರ ಹೆಸರನ್ನು ಒಳಸಬಾರದು.

(ಗೊಂದಲ)

ಶ್ರೀ ಎಸ್. ಸೂರ್ಯನಾರಾಯಣ ರಾವ್.— ಅಧ್ಯಕ್ಷರೆ, ಅಲ್ಲಿ ಹಲ್ಲೆ ಮಾಡಿದರು. ಆ ಊರಿನ ಜನ ಪ್ರತಿಭಟನೆ ಮಾಡಿದರು. ೭ ತಿಂಗಳ ಕಾಲ ಸಮಸ್ಯೆ ಬಗೆಹರಿಯಲಿಲ್ಲ. ಮೇ ತಿಂಗಳಲ್ಲಿ ಆದಂಥ ಅಗ್ರಿಮೆಂಟ್ ಜಾರಿ ಮಾಡದೆ ಬೇರೆ ಕೆಲಸಗಾರರನ್ನು ಇಟ್ಟುಕೊಂಡರು. ೫೦ ಜನರು ಪ್ರದರ್ಶನ ಮಾಡತಕ್ಕದು ನಡೆಯಿತು. ಮೂರು ನಾಲ್ಕು ಜನ ಗೂಂಡಾಗಳು ಫ್ಯಾಕ್ಟರಿಗೆ ಹೋಗಿ ಹಲ್ಲೆ ಮಾಡಿದ್ದಾರೆ.

* The word expunged as ordered by the Chair

ಆ ಸಂದರ್ಭದಲ್ಲಿ ಒಬ್ಬ ಕಾರ್ಮಿಕನಿಗೆ ತುಂಬಾ ಏಟು ಬಿದ್ದು ಬೌರಿಂಗ್ ಆಸ್ಪತ್ರೆಗೆ ಸೇರಿಸಲಾಯಿತು, ಆತನಿಗೆ ತುಂಬಾ ಸೀರಿಯಸ್ ಆದುದರಿಂದ ಅನಂತರ ಅವರನ್ನು ಸ್ಯಾನಿಟೋರಿಯಂದಲ್ಲಿ ಮಲಗಿಸಿದರು. ಹೀಗೆ ಈ ಸರ್ಕಾರ ಮೇಲೆ ಕೆಟ್ಟ ಹೆಸರು ತರಬಹುದು ಎಂದು ನಡೆಯುತ್ತಿದೆ, ಆದುದರಿಂದ, ಇದರ ಬಗ್ಗೆ ಪೂರ್ಣ ಇನ್‌ವೆಸ್ಟಿಗೇಷನ್ ಮಾಡಬೇಕೆಂದು ಸರ್ಕಾರದಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಧರ್ಮಸಿಂಗ್.— ಅಧ್ಯಕ್ಷರೆ, ನಾನು ಹೇಳಿದವರ ಬಗ್ಗೆ ಪ್ರಸ್ತಾಪ ಮಾಡಿರುವುದನ್ನು ತೆಗೆದು ಹಾಕಬೇಕು.

ಅಧ್ಯಕ್ಷರು.— ಅವರ ಹೆಸರನ್ನು ಮಾತ್ರ ಹೇಳಿದ್ದಾರೆ, ಅವರ ಬಗ್ಗೆ ಪ್ರಸ್ತಾಪ ಮಾಡಿಲ್ಲ.

ಶ್ರೀ ಧರ್ಮಸಿಂಗ್.—ಅಧ್ಯಕ್ಷರೆ. ಅವರು ಏನು ಒಂದು ಪದ ಉಪಯೋಗ ಮಾಡಿದ್ದಾರೆ ಅದನ್ನು ತೆಗೆದುಹಾಕಬೇಕು.

MR. SPEAKER.— I will look into the records.

ಶ್ರೀ ಎಸ್. ಸೂರ್ಯನಾರಾಯಣರಾವ್.— ಮನೆಮನೆಗೆ ನುಗ್ಗಿ ಹೊಡೆದಿದ್ದಾರೆ ಪೋಲೀಸರಂ ಪೋಲೀಸ್ ವ್ಯಾನ್‌ನಲ್ಲಿ ಹೋಗಿ ಆ ಜನರನ್ನು ಬೂಟು ಕಾಲಿನಿಂದ ಒದ್ದಿದ್ದಾರೆ. ಹಿಡಿದುಕೊಂಡಂ ಚೆನ್ನಾಗಿ ಹೊಡೆದಿದ್ದಾರೆ. ಮಾನ್ಯ ಮುಖ್ಯಮಂತ್ರಿಯವರೇ ಹೇಳಿದ್ದಾರೆ. ಪೀಸ್‌ಫುಲ್ ಅಜಿಟೇಷನ್ ನಡೆದರೆ ಅದನ್ನು ತಡೆಯಬಹುದು, ಆದರೆ ಅದು ವಯಲೆಟ್ ಆದರೆ ಅದನ್ನು ನಾವು ಟಾಲರೇಟ್ ಮಾಡುವುದಕ್ಕಾಗುವುದಿಲ್ಲ ಎಂದು. ಆವತ್ತು ೧೫೦ ಜನರನ್ನು ಅರೆಸ್ಟ್ ಮಾಡಿದ್ದಾರೆ. ಅವರು ಮನೆ ಮನೆಗೂ ನುಗ್ಗಿ ಹೊಡೆದಿದ್ದಾರೆ. ಈ ಪೋಲೀಸರು ರಾತ್ರಿಯ ಹೊತ್ತು ಅಲ್ಲಿಗೆ ಏತಕ್ಕೆ ಹೋಗಿದ್ದರು, ಅವರಮೇಲೆ ಏತಕ್ಕೆ ಕೈ ಮಾಡಿದರು ಎನ್ನುವ ಬಗ್ಗೆ ನಾನು ಕೇಳಬಯಸುತ್ತೇನೆ. ಆದರೆ ಪೋಲೀಸರಂ ನಿಷ್ಕ್ರಿಯರಾಗಿದ್ದರು ಎಂದು ಹೇಳುವುದು ಸರಿಯಲ್ಲ. ಮಾನ್ಯ ವಿರೋಧಪಕ್ಷದ ನಾಯಕರಾದ ವೀರಪ್ಪ ಮೊಯ್ಲಿಯವರು ಇವತ್ತು ಕರ್ನಾಟಕದ ಜನತೆಯ ಹಿತವನ್ನು ರಕ್ಷಣೆ ಮಾಡುವುದಕ್ಕೆ ಹೊರ ಟಿರುವುದು ನಿಜಕ್ಕೂ ಬಹಳ ಕಳಕಳಿಯ ವಿಷಯ.

ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಮಾನ್ಯ ಸಭಾಧ್ಯಕ್ಷರೆ, ವಿರೋಧಪಕ್ಷದ ನಾಯಕ ರಾದ ಮಾನ್ಯ ವೀರಪ್ಪ ಮೊಯ್ಲಿಯವರು ಹೇಳಿದ್ದನ್ನು ಇದುವರೆಗೂ ನಾನು ಕೇಳಿದೆ. ಅವರು ಪ್ರಮುಖ ವಾಗಿ ಎರಡು ವಿಷಯಗಳನ್ನು ಹೇಳಿದರು. ಮೊದಲನೆಯದು ಎಂದರೆ ಅಲ್ಲಿ ಆಸ್ತಿಪಾಸ್ತಿಯ ಹಾನಿ ಯಾಗಿದೆ, ಕೋಟ್ಯಾಂತರ ರೂಪಾಯಿಗಳಷ್ಟು ಹಾನಿಯಾಗಿದೆ ಎಂದು.

ಇನ್ನು ಎರಡನೆಯದಾಗಿ ಎಂದರೆ ಅಲ್ಲಿನ ಕಾರ್ಮಿಕರು ಯಾರಿದ್ದರು ಅವರನ್ನು ಅತ್ತಿತ್ತ ಓಡಾಡಂ ವುದಕ್ಕೂ ಅವಕಾಶವನ್ನು ಈ ಪೋಲೀಸರು ಕೊಟ್ಟಿಲ್ಲ. ಅಲ್ಲಿ ಗೂಂಡಾಗಿರಿ ಆಗುವುದಕ್ಕೆ ಅವಕಾಶವನ್ನು ಕೊಟ್ಟಿದ್ದಾರೆ, ಎನ್ನುವ ವಿಷಯವನ್ನು ನಾನು ಓದಿ ತಿಳಿದುಕೊಂಡಿದ್ದೇನೆ. ಇಂಥ ಘಟನೆ ನಡೆಯಿಂತು ಎಂದು ಪತ್ರಿಕೆಯಲ್ಲಿ ವರದಿ ಬಂದಾಗ ಟ್ರೇಡ್ ಯೂನಿಯನ್‌ನ ಮೇಲೆ,ಸಿ.ಪಿ.ಐ. ಮತ್ತು ಸಿ.ಪಿ.ಐ (ಎಂ) ಪಕ್ಷದ ಮುಖಂಡರ ಮೇಲೆ ಆಪಾದನೆಗಳು ಬರಬಹುದೆಂದು ತಿಳಿದು ನಾನೇ ಅಲ್ಲಿಗೆ ಹೋಗಿ ವಿಷಯವನ್ನು ತಿಳಿದುಕೊಂಡು ಬಂದಿದ್ದೇನೆ, ಆದರೆ ಈ ಸಮಯದಲ್ಲಿ ಆ ಎಲ್ಲ ವಿಷಯಗಳನ್ನೂ ಸುದೀರ್ಘವಾಗಿ ಹೇಳುವುದಕ್ಕೆ ಹೋಗುವುದಿಲ್ಲ. ನನ್ನ ಸ್ನೇಹಿತರಾದ ಮಾನ್ಯ ವೀರಪ್ಪ ಮೊಯ್ಲಿಯವರು ಇವತ್ತು ಎತ್ತಿರತಕ್ಕ ವಿಷಯ ಒಳ್ಳೆಯ ವಿಷಯ. ಇದು ಬಹಳ ಸಂತೋಷದ ವಿಷಯ. ಆದರೆ ನಾನು ಅವರನ್ನು ಒಂದು ಮಾತು ಕೇಳಬಯಸುತ್ತೇನೆ. ಅವರು ಇಷ್ಟು ವರ್ಷಗಳ ಕಾಲ ಈ ಕಡೆ ಕುಳಿತಿದ್ದಾಗ, ನರಗುಂದ, ನವಲಗುಂದದಲ್ಲಿ ರೈತರ ಮೇಲೆ ಧಾಳಿ ನಡೆದು ನಿರಪರಾಧಿ ರೈತರು ಸತ್ತಾಗ.....

(ಗೊಂದಲ)

ಒಬ್ಬ ಪಬ್ಲಿಕ್ ಸೆಕ್ಟಾರ್‌ನ ಕಾರ್ಮಿಕ ಸತ್ತಾಗ ಆತನ ಬಗ್ಗೆ ಇದೇ ಕಳಕಳಿಯನ್ನು ಏತಕ್ಕೆ ತೋರಿಸಲಿಲ್ಲ? ಇಂಥ ಕಳಕಳಿಯನ್ನು ತೋರುವುದು ಹಾಗಿರಲಿ,ಮೊದಲನೆಯದಾಗಿ ಈ ರೀತಿ ಹಾರಾಡುವುದು ಸರಿಯಲ್ಲ ಮೊದಲು ಇದನ್ನು ಬಿಡಬೇಕೆಂದು ಹೇಳಬಯಸುತ್ತೇನೆ.

ಶ್ರೀ ಬಿ. ಶಿವಣ್ಣ.— ಮಾನ್ಯ ಅಧ್ಯಕ್ಷರೆ, ೧೯೭೨ನೇ ಸಾಲಿನ ಚುನಾವಣೆಯಲ್ಲಿ ನಮ್ಮ ಪಾರ್ಟಿ ಯವರು ಸಪೋರ್ಟ್ ಮಾಡಿದ್ದರಿಂದ ಮಾನ್ಯ ಸದಸ್ಯರು ಆಯ್ಕೆಯಾಗಿದ್ದರು.....

ಶ್ರೀ ಜೆ. ಹೆಚ್. ಪಟೇಲ್.— ಮಾನ್ಯ ಅಧ್ಯಕ್ಷರೆ. ಮಾನ್ಯ ಸದಸ್ಯರಾದ ಕೃಷ್ಣನ್‌ರವರು ಮಾತನಾಡುವಾಗ ಶಿವಣ್ಣನವರು ಏತಕ್ಕೆ ತಮ್ಮ ಹೆಗಲು ಮುಟ್ಟಿ ನೋಡಿಕೊಳ್ಳುತ್ತಿದ್ದಾರೆ? ಮಾನ್ಯ ಕೃಷ್ಣನ್‌ರವರು ಏನು ಹೇಳಿದರು ಎಂಬುದು ಅವರಿಗೆ ಗೊತ್ತಾಗಲಿಲ್ಲವೆಂದು ಕಾಣುತ್ತದೆ.

ಶ್ರೀ ಎಂ. ವೀರಪ್ಪ ಮೊಯ್ಲಿ,— ಮಾನ್ಯ ಅಧ್ಯಕ್ಷರೆ.....

ಶ್ರೀ ಎಂ. ಎಸ್. ಕೃಷ್ಣನ್.— ಪ್ರಾಣ ಹಾನಿಯಾಗುವುದಕ್ಕಾಗಲಿ, ಅಥವಾ ಬೇರೆಯಂದಕ್ಕಾಗಲಿ ನಾವು ಯಾರೂ ಕೂಡ ಕಾರಣರಲ್ಲ. ಮಾನ್ಯ ಸದಸ್ಯರಾದ ಸೂರ್ಯನಾರಾಯಣರಾವ್‌ರವರೂ ಕೂಡ ಕಾರಣರಲ್ಲ. ಅಲ್ಲಿ ಒಬ್ಬ ಮಾಲೀಕ ಚಂಡಾಲ ರೀತಿಯಲ್ಲಿ ವರ್ತನೆ ಮಾಡಿದ್ದಾನೆ. ಕೆಲವು ಗೂಂಡಾಗಳನ್ನು ಕರೆದುಕೊಂಡು ಬಂದು ಹೊಡೆಸಿದ್ದಾನೆ. ಇದನ್ನು ಎನ್‌ಕ್ವೈರಿ ಮಾಡಿಸಿ ಎಂದು ಮಾನ್ಯ ಸದಸ್ಯರಾದ ಸೂರ್ಯನಾರಾಯಣ ರಾವ್‌ರವರು ಹೇಳುತ್ತಿರುವುದು, ಆದರೆ ನೀವು ಇದಕ್ಕೆ ಬಣ್ಣ ಕಟ್ಟಿ ಸಿ.ಪಿ.ಐ. ಮೇಲೆ ಹೇಳುವುದು ಸರಿಯಲ್ಲ. ನಮ್ಮದು ಕೆಂಪು ಬಣ್ಣದ ರಕ್ತ. ನಿಮ್ಮದು ನೀಲಿ ಬಣ್ಣದ ರಕ್ತ. ನಮ್ಮದಕ್ಕೆ ಗ್ಯಾರಂಟಿ ಬಣ್ಣ ಇದೆ. ಆದರೆ ನಿಮ್ಮದಕ್ಕೆ ಗ್ಯಾರಂಟಿ ಇಲ್ಲ. ನನ್ನ ಒಂದು ಅಪೇಕ್ಷೆ ಏನೆಂದರೆ ಈ ರೀತಿಯ ಗೂಂಡಾಗಿರಿಯನ್ನು ಮಾಡುವುದಕ್ಕೆ ಸರ್ಕಾರದವರು ಅವಕಾಶವನ್ನು ಕೊಡುವುದು ಬೇಡ. ಗೂಂಡಾಗಳನ್ನು ಹದ್ದುಬಸ್ತಿನಲ್ಲಿಟ್ಟು ಕಾರ್ಮಿಕರಿಗೆ, ಜನತೆಗೆ ರಕ್ಷಣೆಯನ್ನು ಕೊಡುವ ಕೆಲಸ ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

ಶ್ರೀ ಎಂ. ರಘುಪತಿ.— ಇವತ್ತು ರಾವ್ ಇನ್ವೆಸ್ಟಿಗೇಟಿಂಗ್ ಕಂಪೆನಿಯ ಮೇಲೆ ಒಂದು ಅಚಾತುರ್ಯದ ಘಟನೆ ನಡೆದಿದೆ...

ಶ್ರೀ ಬಿ. ಶಿವಣ್ಣ.— ಮಾನ್ಯ ಅಧ್ಯಕ್ಷರೆ, ಅವರು ಪಾಯಿಂಟ್ ಆಫ್ ಆರ್ಡರ್‌ನ್ನು ರೈಸ್ ಮಾಡಿದ್ದರು...

ಶ್ರೀ ಎಂ. ರಘುಪತಿ.— ಮಾನ್ಯ ಶಿವಣ್ಣನವರೇ, ನೀವು ಈ ಕಡೆ ಕುಳಿತಿದ್ದಾಗಲೂ ಯಾವತ್ತೂ ಮಾತನಾಡಿರಲಿಲ್ಲ, ಇವತ್ತು ಏತಕ್ಕೆ ಮಾತನಾಡುವುದಕ್ಕೆ ಹೋಗುತ್ತೀರಿ ? ಇಲ್ಲಿ ನಡೆದಿರತಕ್ಕ ಘರ್ಷಣೆ ಘಟನೆ ಏನಿದೆ ಅದು ನಮಗೆ ಗೌರವವನ್ನು ತರತಕ್ಕದ್ದಲ್ಲ. ಇದು ನಿಜವಾಗಿಯೂ ಒಂದು ಹೇಯ ಕೃತ್ಯವೆಂದು ಹೇಳಿದರೆ ತಪ್ಪಾಗಲಾರದು. ಮಾನ್ಯ ಸದಸ್ಯರಾದ ಕೃಷ್ಣನ್‌ರವರು ಏನು ಹೇಳಿದರು ಅದನ್ನು ನಾನು ಒಪ್ಪುತ್ತೇನೆ. ಮಾಲೀಕರು ಕಾರ್ಮಿಕರ ಶೋಷಣೆ ಮಾಡಿ ಅವರ ರಕ್ತವನ್ನು ಕುಡಿಯುವುದನ್ನು ಬಿಡಬೇಕು. ಕಾರ್ಮಿಕರಿಗೆ ತೊಂದರೆಯಾಗಿದೆಯೆ ? ಅವರ ಮನಸ್ಸು ನೊಂದಿದೆಯೇ ? ಎಂಬುದನ್ನು ನೋಡಬೇಕು. ಇಲ್ಲಿ ತಪ್ಪು ಯಾರದ್ದು ಎಂಬುದನ್ನು ಪರಿಶೀಲಿಸಿ ನೋಡಬೇಕು. ನನಗೆ ಗೊತ್ತಿರುವಂತೆ ಈಗ್ಗೆ ೬ ತಿಂಗಳಿಂದ ಈ ಒಂದು ಗಲಾಟೆ ನಡೆಯುತ್ತಿತ್ತು. ಅಂದಮೇಲೆ ಹಿಂದಿನ ಸರ್ಕಾರದವರು ೬ ತಿಂಗಳಿಂದ ಏತಕ್ಕೆ ಏನೂ ಕ್ರಮವನ್ನೇ ತೆಗೆದುಕೊಂಡಿರಲಿಲ್ಲ ? ಲೇಬರ್ ಕಮೀಷನರ್‌ರವರನ್ನು ಕರೆಸಿ ಏತಕ್ಕೆ ಏನನ್ನೂ ಹೇಳಲಿಲ್ಲ ? ಆದ್ದರಿಂದ ಇದು ಹಿಂದಿನ ಸರ್ಕಾರದವರೇ ಮಾಡಿದ ತಪ್ಪು ಎಂದು ನಾನು ಹೇಳುತ್ತಿದ್ದೇನೆ.

ಮಾನ್ಯ ಅಧ್ಯಕ್ಷರೆ, ನಾನು ಇನ್ನೂ ಒಂದು ಮಾತನ್ನು ಹೇಳಬೇಕೆಂದರೆ, ಇದೆಲ್ಲಾ ಹಿಂದಿನ ಸರ್ಕಾರ ಇದ್ದಾಗಲೇ ನಡೆದಿರುವುದು. ಇದೆಲ್ಲಾ ನಡೆದಿದ್ದರಿಂದಲೇ ನಾಲ್ಕಾರು ಹೆಣಗಳು ಬಿದ್ದಿದ್ದು. ಎಲ್ಲಿ ನೋಡಿದರೂ ಗೋಲೀಬಾರ್, ಗೋಲೀಬಾರ್. ಮಾತೆತ್ತಿದರೆ ಗೋಲೀಬಾರ್. ಅವತ್ತು ಗೋಲೀಬಾರ್ ಮಾಡಿದವರು ಇವತ್ತು ಹೊರಟುಹೋಗಿದ್ದಾರೆ. ಅವರು ಹೋದದ್ದು ಇವರಿಗೂ ಒಂದು ರೀತಿಯಲ್ಲಿ ಸಂತೋಷವೇ ಆಗಿದೆ...

(ಗೊಂದಲ)

ಶ್ರೀ ಅಜೀಜ್ ಸೇಠ್.— ಮಾನ್ಯ ರಘುಪತಿಯವರು ನಿಮಗೆ ಗ್ರೀನ್ ಸಿಗ್ನಲ್ ಕೊಟ್ಟಿದ್ದಾರೆ. ಇವತ್ತು ನೀವೂ ಕೂಡ ಫಿಲ್ಟರ್ ಆಗಿ ಬಂದಿದ್ದೀರಿ. ಅದನ್ನು ತಾವು ತಿಳಿದುಕೊಳ್ಳಿ.

ಶ್ರೀ ಎಂ. ರಘುಪತಿ.—ಮಾನ್ಯ ಅಧ್ಯಕ್ಷರೆ, ಇವತ್ತು ಮಾನ್ಯ ವಿರೋಧಪಕ್ಷದ ನಾಯಕರಾದ ಪೊಯ್ಲಿಯವರಿಗೆ ಈ ಬಡ ಕಾರ್ಮಿಕರಿಗಿಂತ ಹೆಚ್ಚಾಗಿ ಮಾಲೀಕರಮೇಲೆ ಇಷ್ಟೊಂದು ಕಳಕಳಿ ಬಂದಿರುವುದು ಖಂಡಿತವಾಗಿಯೂ ಬಹಳ ಸಂತೋಷದ ಸಂಗತಿ.....

ಶ್ರೀ ಬಿ. ಭೈರಪ್ಪಾಜಿ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಈರೀತಿ ಹೇಳುವುದು ಸರಿಯಲ್ಲ. ಆಲ್ಲಿ ನಡೆದಿರತಕ್ಕ ಅನ್ಯಾಯವನ್ನು ಸರಿಪಡಿಸಬೇಕೆಂದು ಮಾನ್ಯ ಪೊಯ್ಲಿಯವರು ಹೇಳುತ್ತಿರುವುದು, ಅಷ್ಟೇ ಹೊರತು ಬೇರೆ ಏನೂ ಅಲ್ಲ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಈ ದೌರ್ಜನ್ಯ ಆಲ್ಲಿ ಕೆಲಸಮಾಡತಕ್ಕ ಕಾರ್ಮಿಕರ ಮೇಲಾಗಿದೆ..

ಶ್ರೀ ಬಿ. ಭೈರಪ್ಪಾಜಿ.—ಅಷ್ಟೇ ಅಲ್ಲ, ಬೇರೆಯವರಮೇಲೂ ಕೂಡ ದೌರ್ಜನ್ಯ ನಡೆದಿರಬಹುದು ಆದರೆ ಅದಕ್ಕೆ ಬೆಂಬಲ ಕೊಡಿ ಎಂದು ನಾವೇನೂ ಹೇಳುತ್ತಿಲ್ಲ.....

ಅಧ್ಯಕ್ಷರು.—ಶೂನ್ಯ ವೇಳೆಯನ್ನು ಈರೀತಿ ಅನಾವಶ್ಯಕವಾಗಿದೊಡ್ಡದು ಮಾಡಿಕೊಂಡು ಇದನ್ನು ಚರ್ಚೆಯ ವೇದಿಕೆಯಾಗಿ ಮಾಡುವುದು ಬೇಡ. ಈ ವಿಚಾರಕ್ಕೆ ಸಂಬಂಧಪಟ್ಟವರು ಒಂದೆರಡು ಮಾತುಗಳನ್ನು ಸಂಕ್ಷಿಪ್ತವಾಗಿ ಹೇಳಿ ಎಂದು ನಾನು ಹೇಳಿದೆ ಅಷ್ಟೆ.

ಶ್ರೀ ಎಂ. ರಘುಪತಿ.—ಏನು ಘಟನೆ ನಡೆದಿದೆ, ಇದು ಯಾರಿಗೂ ಗೌರವ ತರತಕ್ಕಂಥ ಘಟನೆಯಲ್ಲ ಈವತ್ತು ನಾನು ಸರ್ಕಾರವನ್ನು ಪ್ರಾರ್ಥನೆ ಮಾಡಿಕೊಳ್ಳುವುದು ಇಷ್ಟೇ, ಆಲ್ಲಿ ಏನು ಘಟನೆ ನಡೆದಿದೆ ಅದನ್ನು ಸರ್ಕಾರದವರು ಸಂಪೂರ್ಣವಾಗಿ, ಕೂಲಂಕಶವಾಗಿ ಪರಿಶೀಲನೆ ಮಾಡಿ, ಕಾರ್ಮಿಕರಿಗೆ ಏನು ತೊಂದರೆ ಯಾಗಿದೆ, ಮಾಲೀಕರಿಗೆ ಏನು ತೊಂದರೆಯಾಗಿದೆ ಅದನ್ನು ಬಗೆಹರಿಸಿ, ಮಾಲೀಕರಲ್ಲಿಯೂ ಕಾರ್ಮಿಕರಲ್ಲಿಯೂ ಸಾಮರಸ್ಯವನ್ನು ಕಾಪಾಡಿಕೊಂಡು ಬರತಕ್ಕಂಥ ವಾತಾವರಣವನ್ನು ನಿರ್ಮಾಣ ಮಾಡತಕ್ಕಂಥ ಸರ್ಕಾರದ ಕರ್ತವ್ಯ. ಇಂಥ ಒಂದು ಸಾಮರಸ್ಯವನ್ನು ಕಾಪಾಡಬೇಕಾದರೆ ಕಾರ್ಮಿಕ ಮುಂಖಂಡರನ್ನು ಮತ್ತು ಮಾಲೀಕರನ್ನು ತಕ್ಷಣ ಕರೆದು ಕಾನೂನಿನ ಚೌಕಟ್ಟಿನಲ್ಲಿ ಸಮಾಲೋಚನೆ ಮಾಡಿ ಪರಿಹಾರ ಕಂಡುಹಿಡಿದು ಯಾವುದೇ ವಿಧಾವಾದ ಗಲಭೆಗೆ ಅವಕಾಶವಿಲ್ಲದಂತೆ ಮಾಡಬೇಕೆಂದು ಸಲಹೆ ಮಾಡುತ್ತೇನೆ.

ಶ್ರೀ ಮೈಕೇಲ್ ಬಿ. ಫರ್ನಾಂಡೀಸ್(ಭಾರತೀನಗರ).—ಮಾನ್ಯ ಅಧ್ಯಕ್ಷರೇ ಈ ಒಂದು ವಿಚಾರದಲ್ಲಿ ಎರಡು ಪ್ರಶ್ನೆಗಳು ಉದ್ಭವವಾಗುತ್ತದೆ. ಒಂದು ಕಾರ್ಮಿಕರ ವಿವಾದ. ಇದು ಪ್ರಾರಂಭವಾಗಿ ಏಳು ತಿಂಗಳಾಯಿತು. ಆಗ ಶ್ರೀಮಾನ್ ಪೊಯಲಿಯವರು ಮಂತ್ರಿಗಳಾಗಿದ್ದರು. ಮತ್ತು ಇನ್ನೂ ಅನೇಕರು ಅವರ ಸಹೋದ್ಯೋಗಿಗಳು ಮಂತ್ರಿಗಳಾಗಿದ್ದರು. ಅವರ ಒಂದು ವೈಫಲ್ಯತೆಯಿಂದಾಗಿ ಈ ಒಂದು ವಿವಾದವನ್ನು ಇನ್ನೂ ಬಗೆಹರಿಸಲಿಕ್ಕೆ ಸಾಧ್ಯವಾಗಲಿಲ್ಲ. ಇದು ಒಂದು ವಿಚಾರ. ಅದಕ್ಕಿಂತ ವಿಂಗಿಲಾಗಿ ಪೋಲೀಸ್‌ನವರು ಯಾವುದೇ ಒಂದುಗಲಭೆ ನಡೆದಾಗಲೂ ಯಾವರೀತಿ ಪಾತ್ರ ವಹಿಸಿದರು ಎನ್ನುವುದನ್ನು ಗಮನಿಸಬೇಕು. ಈ ಪೋಲೀಸ್ ಪ್ರವೃತ್ತಿ ೩೫ ವರ್ಷಗಳಿಂದ ಹಿಡಿದು ಪೊಯಲಿಯವರ ಪಕ್ಷ ಅಧಿಕಾರದಲ್ಲಿದ್ದಾಗಿನಿಂದಲೂ ಸಹಾನುಭೂತಿಯನ್ನು ಪಡೆದುಕೊಂಡೇ ಬಂದಿರುತ್ತದೆ. ಆದ್ದರಿಂದ ನಾವು ಸರ್ಕಾರವನ್ನು ವಹಿಸಿಕೊಂಡ ಎರಡು ವಾರದಲ್ಲಿಯೇ ಈ ಒಂದು ಪ್ರವೃತ್ತಿಯನ್ನು ಬದಲಿಸಲಿಕ್ಕೆ ಸಾಧ್ಯವಾಗುತ್ತದೆಂದು ನಾನು ತಿಳಿದುಕೊಂಡಿಲ್ಲ. ಹಳೆ ಸಂಪ್ರದಾಯವನ್ನು ಬದಲಿಸಲೇ ಬೇಕು. ಹೊಸ ಸರ್ಕಾರ ಬಂದಮೇಲೆ ಪೋಲೀಸ್ ಪ್ರವೃತ್ತಿಯನ್ನು ಹತೋಟಿಯಲ್ಲಿ ಇಟ್ಟುಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು. ಹೊಸ ಸರ್ಕಾರ ಆಡಳಿತಕ್ಕೆ ಬಂದ ಕೂಡಲೆ ಈ ಒಂದು ಪಜೀತಿ ಬಂದದೆ.

ಶ್ರೀ ಎಂ. ವೀರಪ್ಪಮೊಯಿಲಿ.—ಸರ್ಕಾರಕ್ಕೆ ಪಜೀತಿ ಬಂದಿರುವುದರಿಂದ ಜನತೆಗೂ ಪಜೀತಿ ಬಂದಿರುತ್ತದೆಂದು ನನಗನಿಸುತ್ತದೆ,

ಶ್ರೀ ಮೈಕೇಲ್ ಬಿ. ಫರ್ನಾಂಡೀಸ್.—ತಮ್ಮಿಂದ ಬಂದಿದೆ. ೩೫ ವರ್ಷಗಳಿಂದ ಕಾರಣಗಳು ವಿನು ಇಲ್ಲದೆ ದೌರ್ಜನ್ಯ ಕೃತ್ಯಗಳು ನಡೆದಿರುತ್ತದೆ.

(ಮುಂದಲ)

ಶ್ರೀ ಎಂ. ವೀರಪ್ಪಮೊಯಿಲಿ.—ವಿರೋಧಪಕ್ಷದ ಸದಸ್ಯರು ಕೆಲಸಕಾರ್ಯಗಳನ್ನು ಮಾಡತಕ್ಕಂಥದ್ದು ಇದೆ. ವಿರೋಧಪಕ್ಷದ ಸದಸ್ಯರು ಮಾಡತಕ್ಕಂಥರೀತಿಯಲ್ಲಿ ನಮ್ಮ ಗಮನಕ್ಕೆ ಬಂದಾಗ

ರಾಜ್ಯದಲ್ಲಿ ನಡೆದಿರತಕ್ಕಂಥ ಪರಿಸ್ಥಿತಿಯ ಬಗ್ಗೆ ಪ್ರಸ್ತಾಪ ಮಾಡತಕ್ಕಂಥದ್ದು ಇದೆ. ನಮ್ಮಕಾಲದಲ್ಲಿ, ನಮ್ಮ ಕಾಲದ ಸರ್ಕಾರದಲ್ಲಿ ಈರೀತಿ ಆಯಿತು, ಆರೀತಿಯಾಯಿತು ಎಂದು ಹೇಳತಕ್ಕಂಥದ್ದು ಸರಿಯಲ್ಲ. Do not unnecessarily sympathise with the Government.

(ಗೊಂದಲ)

ಶ್ರೀ ಮೈಕೇಲ್ ಬಿ. ಫರ್ನಾಂಡೀಸ್.—ಮಾನ್ಯ ಅಧ್ಯಕ್ಷರೇ ಮಾನ್ಯ ವಿರೋದ ಪಕ್ಷದ ನಾಯಕರು ಹೇಳುವ ಬಗ್ಗೆ ನಮ್ಮದೇನು ಆಕ್ಷೇಪಣೆ ಇಲ್ಲ. ನಾನು ಹೇಳುವುದು ಏನೆಂದರೆ ಹೊಸ ಸರ್ಕಾರಕ್ಕೆ ಇಷ್ಟು ಬೇಗ ಪಜೀತಿಗೆ ಬರಲು ಕಾರಣ, ಜನತೆಗೆ ಪಜೀತಿ ಬರಲು ಕಾರಣ, ವಿರೋದಪಕ್ಷದಲ್ಲಿ ಕುಳಿತುಕೊಂಡಿರತಕ್ಕಂಥವರ ೩೫ ವರ್ಷದ ಆಡಳಿತ ದೌರ್ಜನ್ಯದಿಂದ ಬಂದಿರುತ್ತದೆ, ಇದನ್ನು ಸರಿಪಡಿಸತಕ್ಕಂಥದ್ದು ಹೊಸ ಸರ್ಕಾರದ ಕರ್ತವ್ಯವಾಗಿರುತ್ತದೆ. ಆ ಒಂದುಕಾರಣದಿಂದ ಹೊಸ ಸರ್ಕಾರ ಪಜೀತಿಯನ್ನು ಆಧಾರವಾಗಿ ಇಟ್ಟುಕೊಂಡು ಸರ್ಕಾರವನ್ನು ಹತೋಟಿಯಲ್ಲಿ ಇಟ್ಟುಕೊಳ್ಳಬೇಕೆಂದು ಹೇಳುತ್ತೇನೆ.

(ಗೊಂದಲ)

ಎರಡು ವರ್ಷ ೭ ತಿಂಗಳಲ್ಲಿ ತೀರ್ಮಾನ ಮಾಡಲಿಕ್ಕೆ ಸಾಧ್ಯವಾಗಲಿಲ್ಲ. ಆ ಒಂದಂ ಪ್ರವೃತ್ತಿ ಎಲ್ಲ ಹಳೆಯಂ ಸಂಪ್ರದಾಯಗಳನ್ನು ಹೋಗಲಾಡಿಸಿ ಹೊಸ ಸಂಪ್ರದಾಯವನ್ನು ರಚಿಸಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಚ್. ಗಂಗಾಧರನ್.—ಗಮನ ಸೆಳೆಯುವ ಸೂಚನೆಯನ್ನು ಕಳುಹಿಸತಕ್ಕಂಥದ್ದು ಮತ್ತು ಅದರ ಬಗ್ಗೆ ಚರ್ಚೆ ಮಾಡತಕ್ಕಂಥದ್ದಕ್ಕೆ ಅವಕಾಶ ಕೊಡತಕ್ಕಂಥ ಪದ್ಧತಿ ಇರುತ್ತದೆ. ಗಮನ ಸೆಳೆಯುವ ಪ್ರಶ್ನೆಯನ್ನು ಎತ್ತಿದಾಗ, ಸರ್ಕಾರದ ಗಮನಕ್ಕೆ ತಂದಾಗ ಸರ್ಕಾರ ಏನು ಕಾರ್ಯಕ್ರಮ ತೆಗೆದುಕೊಂಡಿದೆ ಏನು ರಕ್ಷಣೆ ಕೊಟ್ಟಿದೆ ಅದರ ಬಗ್ಗೆ ಉತ್ತರ ಕೊಟ್ಟರೆ ಸಾಕು. ಅದನ್ನು ಬಿಟ್ಟು ವಿಷಯವನ್ನು ಸುದೀರ್ಘವಾಗಿ ಚರ್ಚೆಮಾಡುವುದಕ್ಕೆ ಅವಕಾಶ ಕೊಡತಕ್ಕಂಥ ಸಂಪ್ರದಾಯವನ್ನು ಹಾಕತಕ್ಕಂಥದ್ದು ಸರಿಯಲ್ಲ. ಇದಕ್ಕೆ ಸರ್ಕಾರ ಉತ್ತರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಶ್ರೀಮಾನ್ ಗಂಗಾಧರನ್‌ರವರು ಎತ್ತಿರತಕ್ಕಂಥ ಗಮನ ಸೆಳೆಯುವ ಸೂಚನೆಯನ್ನು ಶೂನ್ಯ ವೇಳೆಯಲ್ಲಿ.....

ಶ್ರೀ ಎಚ್.ಡಿ. ದೇವೇಗೌಡ (ಲೋಕೋಪಯೋಗಿ ಶಾಖೆ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ ಮಾನ್ಯ ಗಂಗಾಧರನ್‌ರವರು ಎತ್ತಿರತಕ್ಕಂಥ ವಿಷಯದಮೇಲೆ ಸಭೆಯ ಗಮನ ಸೆಳೆಯಬಯಸುತ್ತೇನೆ. ವಿರೋಧಪಕ್ಷದ ನಾಯಕರು ನಿಯಮಾವಳಿಯ ಪ್ರಕಾರ ಎತ್ತುವುದಕ್ಕೆ ಸಾಧ್ಯವಿಲ್ಲ ಎನ್ನತಕ್ಕಂಥ ಸೂಚನೆಯನ್ನು ಕೊಟ್ಟಿದ್ದಾರೆ. ಆದರೆ ತಾವು ಕಾರ್ಯಕ್ರಮದ ಪಟ್ಟಿಯಲ್ಲಿ ಎರಡು ಗಮನ ಸೆಳೆಯುವ ಸೂಚನೆಯನ್ನು ಅಳವಡಿಸಿದ್ದೀರಿ. ಮತ್ತು ತಾವು ಮಾಡಿರತಕ್ಕಂಥ ತಿದ್ದುಪಡಿಯಂಪ್ರಕಾರ ದಿವಸದ ಕಾರ್ಯಕಲಾಪಗಳಲ್ಲಿ ಎರಡು ಗಮನ ಸೆಳೆಯುವ ಸೂಚನೆಗೆ ಹೆಚ್ಚಿಗೆ ಹೋಗಲಿಕ್ಕೂ ಸಾಧ್ಯವಿಲ್ಲವೆಂದು ತಾವೇ ನಿರ್ಣಯ ಮಾಡಿದ್ದೀರಿ ಆದರೆ ಈ ಸಭೆ ಈವತ್ತೇ ಕೊನೆಯ ದಿವಸವೆಂದು ಕಾರ್ಯಕಲಾಪಗಳನ್ನು ಗೊತ್ತುಮಾಡಿಕೊಂಡಿರುವುದರಿಂದ ಈ ಒಂದು ಪ್ರಮುಖವಾದ ವಿಷಯವನ್ನು ಎತ್ತಿದ್ದಾರೆ. ಅದು ಅವರ ಕರ್ತವ್ಯ. ಏತಕ್ಕೆಂದರೆ ವಿರೋಧಪಕ್ಷದ ಮುಖಂಡರಾಗಿ ಕೆಲಸವನ್ನು ನಿರ್ವಹಣೆ ಮಾಡತಕ್ಕಂಥ ಕಾಲದಲ್ಲಿ ಪ್ರಮುಖವಾದ ವಿಷಯದ ಬಗ್ಗೆ ತಮ್ಮ ಅನುಮತಿಯನ್ನು ಕೇಳದೆ ಎತ್ತಲಿಕ್ಕೆ ಸಾಧ್ಯವಿಲ್ಲ. ಆದ್ದರಿಂದ ಒಂದು ವಿನಂತಿ ಮಾಡಿಕೊಳ್ಳುತ್ತೇನೆ, ಏತಕ್ಕೆಂದರೆ ವಿಷಯ ಚರ್ಚೆಯಾಗುವುದಕ್ಕೆ ಈವತ್ತಿಗೆ ಮಾತ್ರ ಸೀಮಿತವಾಗಿದೆ. ತಾವು ಏನು ಸಂಪ್ರದಾಯವನ್ನು ಹಾಕಿ ಕೆಲವು ನಿಯಮಾವಳಿ ಪ್ರಕಾರ ಕಾರ್ಯಕಲಾಪಗಳನ್ನು ನಡೆಸಿಕೊಂಡು ಹೋಗಬೇಕೆಂದು ನಿರ್ಣಯ ಮಾಡಿದ್ದೀರಿ ಅದರಂತೆ ನಡೆಯಬೇಕೆ ಹೊರತು ಹೊಸ ಅಧ್ಯಾಯ ಪ್ರಾರಂಭವಾಗಬಾರದು. ಏತಕ್ಕೆಂದರೆ ಸದನದಲ್ಲಿ ನಾವು ಕುಳಿತು ಏನು ನಿರ್ಣಯ ಮಾಡಿರುತ್ತೇವೆ ಅದಕ್ಕೆ ತಲೆಬಾಗಬೇಕಾಗುತ್ತದೆ. ಬಹುಶಃ ಶೂನ್ಯವೇಳೆಯಲ್ಲಿ ಹೇಳತಕ್ಕಂಥದ್ದನ್ನು ನಾವೇ ಸೃಷ್ಟಿಮಾಡಿಕೊಂಡಿರತಕ್ಕಂಥದ್ದು. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳು ಉತ್ತರ

ಏನು ಕೊಡುತ್ತಾರೆ ಆ ಒಂದು ಚೌಕಟ್ಟಿನ ಒಳಗಡೆಯೇ ಚರ್ಚೆಯಾಗಬೇಕು. ಆದನ್ನು ತುಂಬ ದೂರ ಎಳೆಯಬಾರದು. ಆದರಿಂದ ಏನ್ನು ಪ್ರಯೋಜನವಾಗುವುದಿಲ್ಲ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳು ಸರ್ಕಾರದ ಪರವಾಗಿ ಉತ್ತರ ಕೊಟ್ಟರೆ ಬೇರೆ ಕಾರ್ಯಕಲಾಪಗಳಿಗೆ ಹೋಗಬಹುದು.

ಶ್ರೀ ಎಂ. ವೀರಪ್ಪಮೊಯಲಿ.—ತಮ್ಮ ಸ್ಪಷ್ಟೀಕರಣ ಆಮೇಲೆ ಕೊಟ್ಟರೆ ಬಹಳ ಒಳ್ಳೆಯದು. ಮಾನ್ಯ ಸದಸ್ಯರಾದ ಶ್ರೀಮಾನ್ ಗಂಗಾಧರ್‌ರವರು ಮತ್ತು ಮಾನ್ಯ ಸಚಿವರಾದ ಶ್ರೀಮಾನ್ ದೇವೇಗೌಡರು ಇಷ್ಟು ವಿಚಾರ ಎತ್ತಿದ್ದರಿಂದ ಹೇಳಬೇಕಾಗಿದೆ. ನಿಯಮಾವಳಿಯ ಪ್ರಕಾರ ಶೂನ್ಯ ವೇಳೆಯಲ್ಲಿ ಈ ವಿಷಯದಲ್ಲಿ ಪ್ರಸ್ತಾಪ ಮಾಡಲಿಕ್ಕೆ ಪಾರ್ಲಿಮೆಂಟ್‌ನಲ್ಲಿಯಾಗಲಿ. ನಮ್ಮ ಸದನದಲ್ಲಿಯಾಗಲಿ ಯಾವುದಕ್ಕೂ ನಿಯಮಾವಳಿಗೆ ಒಳಪಡುವುದಿಲ್ಲ. ಆದರೂ ಕೂಡ ಗಂಭೀರವಾದ ಪ್ರಶ್ನೆ ಎತ್ತಿದಾಗ ಆದರ ಪ್ರಾಮುಖ್ಯತೆಯನ್ನು ಅರಿಯಬೇಕು. ಹಾಗೆ ಮಾಡದೆ ಆವರ ಮುಕ್ತಾಯ ಮಾಡತಕ್ಕಂಥ ಪ್ರಯತ್ನ ಮಾಡಿದರೆ ಬಹುಶ: ನಾವು ಶೂನ್ಯ ವೇಳೆಗೆ ಒಂದು ನಿಯಮಾವಳಿಯನ್ನು ಮಾಡತಕ್ಕಂಥ ಪ್ರಸಂಗ ಬರಬಹುದು. ಇದಕ್ಕೆ ಅವಕಾಶ ಕೊಡದೆ, ಯಾವುದೇ ಪ್ರಮುಖವಾದ ವಿಷಯ ಬಂದಾಗ ಆದಕ್ಕೆ ಶೂನ್ಯವೇಳೆಯಲ್ಲೂ ಪ್ರಸ್ತಾಪ ಮಾಡಲಿಕ್ಕೆ ಅವಕಾಶ ಕೊಡತಕ್ಕಂಥದ್ದು ಒಳ್ಳಿತಂ ಎನ್ನುವ ವಾದವನ್ನು ಒಪ್ಪುತ್ತೇನೆ. ಆದರೆ ಹಿಂದಿನ ಸರ್ಕಾರ ತುಲನೆಗೆ ಹೋಗದೆ ವಿಷಯ ಎಷ್ಟು ಇದೆ ಆದಕ್ಕೆ ಸೀಮಿತಗೊಳಿಸಿ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಟ್ಟಿದ್ದರೆ ಈ ಪ್ರಶ್ನೆ ಉದ್ಭವವಾಗುತ್ತಿರಲಿಲ್ಲ. ಬರೆ ದೋಷಾರೋಪಣೆ ಮಾಡಿ ಸರ್ಕಾರವನ್ನು ಪೇಚಿಗೆ ಸಿಲಿಕಿಸಬೇಕೆಂಬ ಭಾವನೆ ಇಲ್ಲ. ಯಾವ ಒಂದು ಘಟನೆ ನಡೆದಿದೆ ಅದರಬಗ್ಗೆ ಸ್ಪಷ್ಟವಾದ ಹೇಳಿಕೆಯನ್ನು ಕೊಟ್ಟು ಜನಮಾನದಲ್ಲಿ ಎದ್ದಿರ ತಕ್ಕಂಥ ಗೊಂದಲವನ್ನು ನಿವಾರಿಸತಕ್ಕಂಥ ಕೆಲಸವಾಗಬೇಕು. ಮತ್ತು ಸ್ಪಷ್ಟವಾಗಿ ಕರ್ನಾಟಕ ರಾಜ್ಯದಲ್ಲಿ ಜನತೆಯ ಆಸ್ತಿಪಾಸ್ತಿಬಗ್ಗೆ, ಮಾಲೀಕರ ಪರವಾಗಿ ಮತ್ತು ಅಲ್ಲಿಯ ನೌಕರರ ಪರವಾಗಿ ಒಳ್ಳೆಯಂ ವಾತಾವರಣ ನಿರ್ಮಾಣ ಮಾಡತಕ್ಕಂಥ ಆಗತ್ಯತೆ ಇದೆ ಎಂದು ಹೇಳುತ್ತೇನೆ. ಪರಿಹಾರ ಮಾಡಲಿಕ್ಕೆ ಸರಿಯಾದ ವಿಧೇಯಂಕ ಇದೆ. ಕಾನೂನನ್ನು ಕೈಯಲ್ಲಿ ಇಟ್ಟುಕೊಂಡು ಕೆಲಸ ಮಾಡಿದರೆ ಸರಿಯಾಗುತ್ತದೆ, ಇದು ಸರ್ಕಾರದ ಕರ್ತವ್ಯವು ಆಗಿದೆ. ಇದರ ಬಗ್ಗೆ ಒಂದು ಸ್ಪಷ್ಟವಾದ ನಿಲುವನ್ನು ಕರ್ನಾಟಕ ರಾಜ್ಯದ ಜನತೆಗೆ ಕೊಡಬೇಕು. ಈಬಗ್ಗೆ ಪ್ರಸ್ತಾಪ ಮಾಡಿದ್ದೇವೆ, ಇದಕ್ಕೆ ತಾವೇ ಕಾರಣಬದ್ಧರು, ಏನಾದರೂ ತೊಂದರೆಯಾದಾಗ ಆದನ್ನು ಸ್ಪಷ್ಟೀಕರಿಸಿದರೆ ಗೊಂದಲ ಬರುತ್ತಿರಲಿಲ್ಲ. ಕಾವೆ್ರೀಡೆ ಸೂರ್ಯನಾರಾಯಣರಾವ್ ಮತ್ತು ಕೃಷ್ಣನ್ ಹೇಳಿದ ಪ್ರಕಾರ ಸರಿಯಾದ ವಿಚಾರಣೆ ಮಾಡಿ. ಇಲ್ಲದಿದ್ದರೆ ನ್ಯಾಯಾಂಗ ತನಿಖೆಯಾದರೂ ಮಾಡಬೇಕು.

ಶ್ರೀ ಎಂ.ಎಸ್. ಕೃಷ್ಣನ್.—ನಾನಂ ಕ್ರಿಯಾಲೋಪ ಎತ್ತುತ್ತಿದ್ದೇನೆ.

MR. SPEAKER.—There cannot be a point of order on the point of order. You are a senier member. Let us dispose of all these points.

ಶ್ರೀ ಎಂ.ಎಸ್. ಕೃಷ್ಣನ್ —ಅವರು ಮಾತನಾಡುವಾಗ ತಮ್ಮ ಅನುಮತಿ ತೆಗೆದುಕೊಳ್ಳಬೇಕು. ಮಾನ್ಯ ವೀರಪ್ಪಮೊಯಿಲಿಯವರು ಮಾತನಾಡುವಾಗ ಮಾನ್ಯ ರಘುಪತಿಯವರು ಮಾತನಾಡಿದರು. ಯಾರೇ ಮಾತನಾಡಬೇಕಾದರೂ ನಿಯಮಾವಳಿಯ ಪ್ರಕಾರ ತಮ್ಮ ಅನುಮತಿಯನ್ನು ತೆಗೆದುಕೊಳ್ಳಬೇಕು. ತಾವು ಅನುಮತಿ ಕೊಡಬೇಕು, ಇಲ್ಲದಿದ್ದರೆ ಯಾರೂ ಮಾತನಾಡುವುದಕ್ಕೆ ಸಾಧ್ಯವಿಲ್ಲ. ರೂಲ್ಸ್ ಆಫ್ ಪ್ರೊಸಿಜರ್ ಕೆಳಗೆ ಒಂದು ವೇಳೆ ಶೂನ್ಯವೇಳೆಯಲ್ಲಿ ಈ ತರಹ ಮಾತನಾಡಲು ಒಂದು ಅವಕಾಶ ವಿದೆ.

Rule 335 says as follows.—

"A member wishes to bring to the notice of the House any matter which is not a point of order shall give notice to the Secretary in writing stating briefly the points which he wishes to raise in the House together with reasons, for wishing to raise it and he shall be permitted to raise it only after the Speaker has given his consent and at such time and date as the Speaker may fix."

ಈ ಒಂದು ಕಾನೂನಿನ ಚೌಕಟ್ಟಿನೊಳಗಡೆ ಆ ಅರ್ಥವನ್ನು ಪುಷ್ಟೀಕರಿಸಿ, ಅದರ ಆಧಾರದ ಮೇಲೆ ಪರ್ಮಿಷನ್ ಅಥವಾ ಕನ್‌ಸೆಂಟ್ ಕೊಡುತ್ತೀರಾ ? ಅಥವಾ ಶೂನ್ಯವೇಳೆ ಆಧಾರದ ಮೇಲೆ ಕೊಟ್ಟಿದ್ದೀರಾ ? ಹಾಗೇನಾದರೂ ತಾವು ಅವಕಾಶ ಕೊಟ್ಟಿದ್ದರೆ ಅದರ ಬಗ್ಗೆ ನಮ್ಮ ವಾದವಿಲ್ಲ. ಎಲ್ಲರೂ ಮಾತನಾಡಿದ್ದಾರೆ...

ಅಧ್ಯಕ್ಷರು.—ಈ ವಿಚಾರವನ್ನು ಮಾನ್ಯ ಸದಸ್ಯರು ಗಮನಿಸಿದ್ದರೆ, ನಿಮಗೂ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೇನೆ. ಮಾನ್ಯ ಸದಸ್ಯರು ಹೇಳಿದಹಾಗೆ ಇದು ಸಂಕ್ಷಿಪ್ತ ಸಮಾವೇಶ, ಹೊಸದಾಗಿ ಸಭೆ ಸೇರಿದೆ. ನಿಯಮಗಳ ಪರಿಚಯ ಸಾಕಷ್ಟು ಸದಸ್ಯರಿಗೆ ಆಗದೇ ಇರುವುದರಿಂದ ಇಂತಹದ್ದಕ್ಕೆ ಅವಕಾಶವಾಗಿದೆ. ಈ ಸಂದರ್ಭದಲ್ಲಿ ವಿಶೇಷವಾದಂತಹ ಪರಿಸ್ಥಿತಿಯನ್ನು ಗಮನದಲ್ಲಿಟ್ಟು, ಶೂನ್ಯ ವೇಳೆಯಲ್ಲಿನ ಚರ್ಚೆಯನ್ನು ಒಂದು ಪ್ರವೃತ್ತಿಯನ್ನಾಗಿ ಮಾಡಲಾರರಿ ಎಂದು ನಮ್ಮ ಸದಸ್ಯರಲ್ಲಿ ಅತ್ಯಂತ ವಿಶ್ವಾಸ ಇದೆ It is only an exception to the rule and convention followed both in Parliament and in legislatures. I hope that hon. member will agree on this. I request the hon'ble Chief Minister to reply on this.

SRI RAMAKRISHNA HEGDE.—Sir,

MR. SPEAKER.—Before that I request the concerned authorities to supply the copies of Kudoor Commission report to the Press.

SRI RAMAKRISHNA HEGDE.—Sir, they will be supplied.

ಮಾನ್ಯ ಅಧ್ಯಕ್ಷರೇ ಇದಕ್ಕೆ ಏನು ಉತ್ತರ ಕೊಡಬೇಕೆಂದು ಗೊತ್ತಿಲ್ಲ. ಮಾನ್ಯ ವಿರೋಧಪಕ್ಷದ ನಾಯಕರೇ ಒಪ್ಪಿಕೊಂಡಂತೆ ಅವರು ಎತ್ತಿದಂತಹ ವಿಚಾರ ಗೈರು ಕಾಯಿದೆ ರೀತಿಯಿಂದ ಎತ್ತಿದರು. ನಮಗೆ ಯಾವುದೆ ತರಹದ ಮುನ್ಸೂಚನೆ ಇಲ್ಲದೆ ಯಾವುದಾದರೂ ವಿಷಯವನ್ನು ಇದ್ದಕಿದ್ದ ಹಾಗೆ ಎತ್ತಿದರೆ ಅದಕ್ಕೆ ಸರ್ಕಾರದಿಂದ ಉತ್ತರ ನಿರೀಕ್ಷೆ ಮಾಡುವುದು ಸರಿಯಲ್ಲ ಅದು ನನಗೆ ಗೊತ್ತುಂಟು, ಶ್ರೀಮಾನ್ ವೀರಪ್ಪಮೊಯಿಲಿಯವರು ಅವರ ಅನುಭವದಿಂದ ಇದೇ ಮಾತನ್ನು ಒಪ್ಪಿಕೊಳ್ಳಬಹುದು. ಆದರೆ ನನಗೆ ಒಂದು ಸಂತೋಷ. ಇಂದಿನ ವಿರೋಧಪಕ್ಷದ ನಾಯಕರು ತಮ್ಮ ಹೊಸ ಪಾತ್ರವನ್ನು ತತ್‌ಕ್ಷಣವೇ ಅತ್ಯಂತ ಮುತುವರ್ಜಿಯಿಂದ ನಿರ್ವಹಿಸುತ್ತಿದ್ದಾರೆ. ಇವರಿಗೆ ಧಿಡೀರ್ ಅರಿವು, ಸಾರ್ವಜನಿಕ ಸಂಪತ್ತು, ಜೀವನ ಮತ್ತು ಕಾಯಿದೆ ಸುವ್ಯವಸ್ಥೆಯ ಬಗ್ಗೆ ಎತ್ತಿದ್ದು ಕೂಡ ನನಗೆ ಸಂತೋಷ. ಸಾರ್ವಜನಿಕರ ಸ್ಮರಣೆ ಬಹಳ ಹ್ರಸ್ವವಾದುದು ಎಂದು ಹೇಳುತ್ತೇನೆ. Public memory is always short. ಆದರೆ ಮಾಜಿ ಅರ್ಥಮಂತ್ರಿಗಳ ಸ್ಮರಣೆಯನ್ನು ಆಷ್ಟೆ ವಿಶ್ವಾಸದಿಂದ ನಾನು ಒಪ್ಪುತ್ತೇನೆ. ಈಗ ಕಳೆದ ೮-೧೦ ದಿವಸಗಳಲ್ಲಿ ನಮ್ಮ ಬೆಂಗಳೂರು ಶಹರದಲ್ಲಿ ಕೆಲವು ಅಹ್ರಿಯವಾದಂತಹ ಘಟನೆಗಳು ಆಗಿವೆ ಮಲ್ಲೇಶ್ವರದಲ್ಲಿ ಒಂದು ಘಟನೆಯಾಯಿತು, ವೈಟ್‌ಫೀಲ್ಡ್‌ನಲ್ಲಿ ಒಂದು ಘಟನೆಯಾಯಿತು ಇನ್ನೂ ಸಣ್ಣ ಪುಟ್ಟ ಘಟನೆಗಳು ಆಗಿವೆ. ಅದರ ಬಗ್ಗೆ ಎರಡು ಶಬ್ದ ಹೇಳುವುದಕ್ಕೆ ಮುಂಚೆ ಇಲ್ಲಿಯವರೆಗೆ ಶ ಕಡೆ ಇರತಕ್ಕ ಸ್ನೇಹಿತರು ಬಹಳ ಪಾದ ಮಾಡಿದ್ದಾರೆ, ತುಂಬಾ ವಿರೋಧಾದಂತಹ ವಾದವನ್ನು ವ್ಯಕ್ತ ಪಡಿಸಿದರು. ಹೆಣ್ಣುಮಕ್ಕಳ ಮಾನ ಮಾರ್ಯದೆ ಉಳಿಯುತ್ತದೆಯೇ ಪಂಚೆಯಲ್ಲಿರುವ ಸಾಮಾನ್ಯ ಗಳನ್ನು ಕಿತ್ತುಕೊಂಡು ಹೋಗುತ್ತಿದ್ದಾರೆಂದು ಈ ಒಂದು ಚಿಂತನೆಯನ್ನು ಅವರು ವ್ಯಕ್ತಪಡಿಸುವುದಕ್ಕೆ ನನ್ನ ಆಕ್ಷೇಪಣೆ ಇಲ್ಲ. ಇಷ್ಟು ಮಾತ್ರ ಬೇಕಾಗಿತ್ತೇನೆ ಜಿತೆಗೆ ಅವಕಾಶ ಕೊಡುವುದು ಇಲ್ಲಿ ಒಂದೆರಡು ಪೂರ್ವದ ಘಟನೆಗಳನ್ನು ನೆನಪು ಮಾಡಿಕೊಟ್ಟರೆ ಅವರು ಬೇಸರ ಮಾಡಿಕೊಳ್ಳಬಹುದು.

ಶ್ರೀ ಎಂ. ವೀರಪ್ಪಮೊಯಿಲಿ.—ಹಿಂದೆ ಆದದ್ದನ್ನು ಪ್ರಸ್ತಾಪ ಮಾಡಿ, ಈಗ ಆಗಿರುವುದನು ಮುಚ್ಚುವುದು ಬೇಡ.

ಶ್ರೀ ರಾಮಕೃಷ್ಣ ಹೆಗಡೆ.—ಆ ಕೆಲಸ ಮಾಡುವುದಿಲ್ಲ.

ಶ್ರೀ ಎಂ. ರಘುಪತಿ.—ವಿರೋಧ ಪಕ್ಷದ ನಾಯಕರು ಎಷ್ಟೇ ಪ್ರಸ್ತಾಪ ಮಾಡಿದರೂ, ಹಿಂದಿನ ದನ್ನು ಮರೆಮಾಚುವುದಕ್ಕಾಗುವುದಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.- ತಾವು ವ್ಯಕ್ತ ಮಾಡಿದಂತಹ ಚಿಂತನೆಗೆ ಮತ್ತು ಸಾರ್ವಜನಿಕರಿಗೆ ನಾನು ಉತ್ತರ ಕೊಡುತ್ತೇನೆ. ಪ್ರಜಾವಾಣಿ ಮತ್ತು ಡೆಕ್ಕನ್‌ಹೆರಾಲ್ಡ್ ಪತ್ರಿಕಾಲಯಗಳ ಮೇಲೆ ಹಲ್ಲೆ ಆಯಿತು, ಆಗ ನೀವು ಏನು ಮಾಡುತ್ತಾ ಇದ್ದಿರಿ ? ಸರ್ಕಾರ ಏನು ಮಾಡುತ್ತಾ ಇತ್ತು ? ಪೋಲೀಸ್‌ನವರು ಏನು ಮಾಡುತ್ತಿದ್ದರು ? ಆಮೇಲೆ ಇಂಡಿಯನ್ ಎಕ್ಸ್‌ಪ್ರೆಸ್ ಮತ್ತು ಕನ್ನಡಪ್ರಭಾ ಪತ್ರಿಕಾಲಯಗಳ ಮೇಲೆ ಧಾಳಿ ಮಾಡಿ ಬೀಗ ಹಾಕಿದರು, ಆಗ ಪೋಲೀಸ್‌ನವರು ಏನು ಮಾಡುತ್ತಿದ್ದರು ?

ಶ್ರೀ ಬಿ. ಶಿವಣ್ಣ.—ಅಧ್ಯಕ್ಷರೇ ನಾನು ಕ್ರಿಯಾಲೋಪವನ್ನು ಎತ್ತುತ್ತೇನೆ.

ಅಧ್ಯಕ್ಷರು.—ಮುಖ್ಯಮಂತ್ರಿಗಳು ಉತ್ತರವನ್ನು ಹೇಳುತ್ತಿದ್ದಾರೆ.

ಶ್ರೀ ರಾಮಕೃಷ್ಣ ಹೆಗಡೆ.—ಸದಸ್ಯರು ಅಪ್ರಿಯವಾದುದನ್ನು ಕೇಳಬೇಕು.

ಅಧ್ಯಕ್ಷರು.—ಮಾನ್ಯ ಸದಸ್ಯರಾದ ಶಿವಣ್ಣನವರೇ ನೀವು ಹೇಳುವುದನ್ನು ಅಷ್ಟೇ ತಾಳ್ಮೆಯಿಂದ ಕೇಳಿದ್ದಾರೆ. ಕೊಡುವವರು, ತೆಗೆದುಕೊಳ್ಳುವುದಕ್ಕೆ ಸಿದ್ಧರಾಗಿರಬೇಕು.

ಶ್ರೀ ರಾಮಕೃಷ್ಣ ಹೆಗಡೆ.—ಹಿರಿಯ ಪೋಲೀಸ್ ಅಧಿಕಾರಿಯ ಮೇಲೆ ಒಬ್ಬ ಪಾರ್ಲಿಮೆಂಟ್ ಸದಸ್ಯರು ಹಲ್ಲೆಮಾಡಿದರು. ಇವತ್ತು ನಮಗೆ ಬುದ್ಧಿವಾದ ಹೇಳುವುದಕ್ಕೆ ಹೊಸ ಪಾತ್ರವನ್ನು ವಹಿಸಿದ್ದೀರಿ. ಇದರ ಅರ್ಥ ಬುದ್ಧಿವಾದ ಹೇಳುವಾಗ ಸ್ವಲ್ಪವಾದರೂ ಪಶ್ಚಾತ್ತಾಪದಿಂದ ಹೇಳಬೇಕು. ನಾವು ಇದ್ದೂ ಆಗ ಮಾಡುವುದಕ್ಕೆ ಸಾಧ್ಯವಾಗಲಿಲ್ಲ, ನೀವಾದರೂ ಮಾಡಿ ಎಂದು ಹೇಳಿ.

ಶ್ರೀ ಎಂ. ವೀರಪ್ಪಮೊಯಿಲಿ.—ಈಗ ನಡೆದ ಘಟನೆಯ ಬಗ್ಗೆ ನಿಮಗೆ ಪಶ್ಚಾತ್ತಾಪ ಇಲ್ಲವೆಂದು ನಾವು ತಿಳಿದುಕೊಂಡರೆ.

ಶ್ರೀ ರಾಮಕೃಷ್ಣ ಹೆಗಡೆ.—ಇದರ ಬಗ್ಗೆ ನಾನು ಪಶ್ಚಾತ್ತಾಪ ಮಾಡುತ್ತಿದ್ದೇನೆ.

ಈಗ ವೈಟ್ ಫೀಲ್ಡ್‌ನಲ್ಲಿ ನಡೆದಿರುವಂತಹ ಘಟನೆ ನಿಜ ಅಲ್ಲಿ ಒಂದು ದುರ್ಘಟನೆ ನಡೆದಿದೆ. ಅಲ್ಲಿರುವಂತಹ ಟಲಿವಿಜನ್ ಫ್ಯಾಕ್ಟರಿಗೆ ನಾಗ್ಪಿ ಕೆಲವಾರು ಸಾಮಾನುಗಳನ್ನು ಒಡೆದಿದ್ದಾರೆ, ಮತ್ತು ಆ ಫ್ಯಾಕ್ಟರಿಯು ಪಾಲೀಕರಿಗೆ ಹಾನಿಯಾಗಿದೆ. ಆದರೆ ಈ ಹಿನ್ನೆಲೆಯಲ್ಲಿ ಏನು ಇದೆ ಎಂಬುದನ್ನು ಕೂಡ ನಾವು ನೋಡಬೇಕಾಗುತ್ತದೆ. ನಮ್ಮ ಮಾನ್ಯ ಸದಸ್ಯರಾದಂಥ ಶ್ರೀಮಾನ್ ಸೂರ್ಯನಾರಾಯಣರಾವ್‌ರವರು ಮತ್ತು ಶ್ರೀಮಾನ್ ಎಂ.ಎಸ್. ಕೃಷ್ಣಸ್ವಾಮಿರವರು ಹಾಗೂ ಮೈಕೇಲ್ ಫರ್ನಾಂಡೀಸ್‌ರವರು ಕೂಡ ಒಂದು ಮಾತು ಹೇಳಿದರು ಆ ಕಂಪನಿಯ ಮಾಲೀಕರು ಕೆಲವು ವರ್ಷಗಳ ಹಿಂದೆ ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಿದ್ದಂಥ ನೌಕರರನ್ನು ವಜಾ ಮಾಡಿದ್ದಾರೆ ಎಂದು. ಈ ವಜಾ ಮಾಡಿದ ನೌಕರರನ್ನು ಎದುರಿಸುವುದಕ್ಕಾಗಿ ಒಂದು ಗುಂಪು ಕಟ್ಟಿಕೊಂಡಿದ್ದರು. ಆ ಗುಂಡಾಗಳ ಗುಂಪಿಗೂ ನಿಮ್ಮ ಕಾಂಗ್ರೆಸ್ (ಐ) ಪಕ್ಷಕ್ಕೆ ಒಂದು ಸಂಬಂಧವಿತ್ತೆಂದು ಎಲ್ಲರಿಗೂ ಗೊತ್ತಿರುವಂತಹ ವಿಚಾರ. ಆ ಒಂದು ದ್ವೇಷ ನೊದಲಿನಿಂದಲೂ ಬೆಳೆದುಕೊಂಡು ಬಂದಿದೆ. ಆದರೂ ಕೂಡ ವೈಟ್‌ಫೀಲ್ಡ್‌ನಲ್ಲಿ ಇಂತಹ ಘಟನೆ ನಡೆದ ಸಮಾಚಾರ ನನಗೆ ಗೊತ್ತಾದ ಕೂಡಲೆ ಎಷ್ಟು ಜನ ಪೋಲೀಸ್ ಪಡೆ ಬೇಕೋ ಅಷ್ಟು ಜನ ಪೋಲೀಸಿನವರನ್ನು ತೆಗೆದುಕೊಂಡು ಹೋಗಿ ಆಗಿರತಕ್ಕಂಥ ಘಟನೆಯನ್ನು ನಿವಾರಣೆ ಮಾಡಬೇಕೆಂದು ಸಹ ಹೇಳಿದ್ದೇನೆ. ಮತ್ತು ಇನ್ನು ಮುಂದೆ ಆ ರೀತಿಯ ವಾತಾವರಣ ಉಂಟಾಗದಂಥಹ ರೀತಿಯಲ್ಲಿ ನೋಡಿಕೊಳ್ಳುವಂತೆ ತಿಳಿಸಿದ್ದೇವೆ. ಮತ್ತು ಉನ್ನತ ಪೋಲೀಸ್ ಅಧಿಕಾರಿಗಳನ್ನು ಕೂಡ ಕಳುಹಿಸಿಕೊಟ್ಟಿದ್ದೇನೆ. ಆದರೆ ಇದರ ಬಗ್ಗೆ ನಾನು ಎರಡು ವಿಷಯಗಳನ್ನು ಈ ಸಭೆಯ ಗಮನಕ್ಕೆ ತರಬಯಸುತ್ತೇನೆ. ಅದು ಏನೆಂದರೆ ನಮ್ಮ ಪೋಲೀಸ್ ಸಿಬ್ಬಂದಿಯಲ್ಲಿರುವಂತಹ ದೃಷ್ಟಿಯನ್ನು ಬದಲಾವಣೆ ಮಾಡಬೇಕು. ಪಕ್ಷಪಾತ ದೃಷ್ಟಿಯನ್ನು ಬಿಟ್ಟು ಎಲ್ಲರನ್ನು ಒಂದೇ ಸಮನಾಗಿ ನೋಡುವಂತೆ ಮಾರ್ಪಾಡು ಮಾಡಬೇಕು. ಹಿಂದಿನ ಸರ್ಕಾರದ ಮಂತ್ರಿಗಳು ಪೋಲೀಸಿನವರಿಗೆ ಪ್ರೋತ್ಸಾಹ ಕೊಟ್ಟು ಅತಿ ಹೆಚ್ಚಿನ ಪೇರಣೆಯನ್ನು ಕೊಟ್ಟಿದ್ದರು. ಆ ರೀತಿಯ ಒಂದು ಪ್ರೇರಣೆಯನ್ನು ನಮ್ಮ ಸರ್ಕಾರ ಕೊಡುವುದಕ್ಕೆ ಬಯಸುವುದಿಲ್ಲ. ಪೋಲೀಸ್ ಅಧಿಕಾರಿಗಳು ಇರುವುದು ನಗರದು ಮತ್ತು ಹಳ್ಳಿಗಳಲ್ಲಿ ವಾಸ ಮಾಡುವಂತಹ ಶ್ರೀಸಾಮಾನ್ಯನ ರಕ್ಷಣೆ ಮಾಡುವುದಕ್ಕಾಗಿ ಮತ್ತು

ಸಾರ್ವಜನಿಕರ ಆಸ್ತಿಪಾಸ್ತಿಯನ್ನು ರಕ್ಷಣೆ ಮಾಡುವುದಕ್ಕಾಗಿ ನಾಗರೀಕರ ಮಾನವನ್ನು ಕಾಪಾಡುವುದಕ್ಕಾಗಿ ಮತ್ತು ಅವರ ರಕ್ಷಣೆ ಮಾಡುವುದಕ್ಕಾಗಿ ಅಷ್ಟೇ ವಿನಹಃ ಬೇರೆ ಯಾವ ರೀತಿಯಲ್ಲಿಯು ವರ್ತಿಸ ಬಾರದೆಂದು ನನ್ನ ಭಾವನೆ. ಹಿಂದಿನ ಸರ್ಕಾರದಲ್ಲಿ ಪೋಲೀಸಿನವರು ಯಾವ ರೀತಿಯಲ್ಲಿ ವರ್ತನೆ ಮಾಡಿ ದ್ದಾರೆಂದು ತಿಳಿದುಕೊಂಡರೆ ಅದು ನನಗೆ ಬಹಳ ದುಃಖವನ್ನುಂಟುಮಾಡುತ್ತದೆ. ರೈತರು ಒಂದು ಕಡೆ ಶಾಂತಿಯುತವಾಗಿ ಚಳುವಳಿಯನ್ನು ಮಾಡಿದರೆ ಅವರ ಮೇಲೆ ವಿನಾಕಾರಣ ಗುಂಡು ಹಾಕುತ್ತಿದ್ದರು. ಶಾಂತಿಯುತವಾಗಿ ಚಳುವಳಿಯನ್ನು ಮಾಡಿದರೆ ವಿನಾಕಾರಣ ಲಾಠಿ ಚಾರ್ಜ್ ಮಾಡುತ್ತಿದ್ದರು. ಸುಮಾರು ಎರಡೂವರೆ ವರ್ಷಗಳಲ್ಲಿ ೧೩೯ ಜನ ರೈತರನ್ನು ಕೊಂದಿದ್ದಾರೆ. ಆದ್ದರಿಂದ ನಮ್ಮ ಸರ್ಕಾರ ದಲ್ಲಿ ಪೋಲೀಸಿನವರ ಪಾತ್ರ ಸಂಪೂರ್ಣವಾಗಿ ಬದಲಾವಣೆಯಾಗಬೇಕು. ರೈತರು ಮಾಡಿದಂಥ ಅಪ ರಾಧವಾದರೂ ಏನು ? ರೈತರೇನಾದರೂ ಹಿಂಸಾತ್ಮಕ ಕೃತ್ಯದಲ್ಲಿ ತೊಡಗಿದ್ದರೆ ? ಒಂದು ವೇಳೆ ಏನಾದರೂ ಸಣ್ಣಪುಟ್ಟ ಗಲಾಟೆಗಳಾದರೆ ಆನೇಕ ಜನ ಗುಂಡಾಗಳು ಅದೇ ಒಂದು ಉದ್ಯೋಗದಲ್ಲಿ ತೊಡಗಿದ್ದಾರೆ. ಅವರು ಇದರಿಂದಲೇ ಜೀವನ ಮಾಡುವವರು. ಎಲ್ಲಿಯಾದರೂ ಚಳುವಳಿಗಳಾದರೆ ತಕ್ಷಣ ಅಲ್ಲಿಗೆ ಸೇರು ತ್ತಾರೆ. ಸಾರ್ವಜನಿಕರ ಆಸ್ತಿಪಾಸ್ತಿಗಳಿಗೆ ನಷ್ಟವನ್ನುಂಟು ಮಾಡುತ್ತಾರೆ. ಇದರಿಂದ ಪೋಲೀಸ್ ನವರ ದೃಷ್ಟಿಯನ್ನು ಸಂಪೂರ್ಣವಾಗಿ ಬದಲಾಣೆ ಮಾಡಬೇಕೆಂದು ನನ್ನ ಆಸೆ. ಪೋಲೀಸ್‌ನವರಲ್ಲಿ ಹೊಸ ರೀತಿಯ ಒಂದು ನವ ಚೈತನ್ಯವನ್ನು ಬೆಳೆಸಬೇಕು. ಅದೇ ರೀತಿಯಲ್ಲಿ ಬರೀ ಪೋಲೀಸ್ ಖಾತೆ ಯೊಂದರಲ್ಲಿಯೇ ಅಲ್ಲ ಎಲ್ಲಾ ಖಾತೆಗಳಲ್ಲಿಯು ನೌಕರರಲ್ಲಿ ಹೊಸ ಚೈತನ್ಯವನ್ನು ಬೆಳೆಸಬೇಕು. ಆ ರೀತಿ ಎಲ್ಲಿಯಾದರೂ ಹಿಂಸಾಚಾರ ನಡೆದರೆ ಕಣ್ಣು ಮುಚ್ಚಿಕೊಂಡು ಕುಳಿತು ನೋಡಬೇಕೆಂಬ ಆಸೆ ನಮಗೇನು ಇಲ್ಲ. ಅದು ಬಿಟ್ಟು ರೈತರು ಅಹಿಂಸಾಚಾರದಿಂದ, ಶಾಂತಿಯುತವಾಗಿ ಕಾರ್ಮಿಕರಾಗಲಿ, ರೈತರಾಗಲಿ, ವಿದ್ಯಾರ್ಥಿಗಳಾಗಲಿ ಯಾರೇ ಆಗಲಿ ಚಳುವಳಿಯನ್ನು ಮಾಡುತ್ತಿದ್ದರೆ ಅಲ್ಲಿಯವರಿಗೆ ಪೋಲೀಸ್‌ನವರು ಯಾವುದೇ ರೀತಿಯ ಕ್ರಮ ಕೈಗೊಳ್ಳಬಾರದು. ಚಳುವಳಿ ಮಾಡುವಂತಾದ್ದು ಪ್ರಜಾಪ್ರಭುತ್ವದ ಮೂಲಭೂತ ಹಕ್ಕು. ಚಳುವಳಿ ಮಾಡುವಾಗ ಸಾರ್ವಜನಿಕರಿಗೆ ತೊಂದರೆಯಾಗದಂತೆ ಮಾಡಬೇಕು. ಶಾಂತಿಯುತವಾಗಿ ರೈತರು ಚಳುವಳಿಯನ್ನು ಮಾಡಿದರೆ ಅಂತಹ ರೈತರ ಮೇಲೆ ಗುಂಡು ಹಾಕುವುದು ಯಾವ ನ್ಯಾಯ ?

ಶ್ರೀ ಎಂ. ವೀರಪ್ಪಮೊಯ್ಲಿ.—ತಾವು ಹೇಳಿದ ಪ್ರಕಾರ, ರೈತರು ಹೇಳಿದ ಪ್ರಕಾರ ಇಲ್ಲ. ರೈತರು ಬೆಂಗಳೂರಿಗೆ ಬಂದಾಗ ಅವರಿಗೆ ನಾವು ನೀರು ಕೊಟ್ಟು ಉಪಚಾರ ಮಾಡಿ ಶಾಂತಿಯುತವಾಗಿ ಕಳುಹಿಸಿ ಕೊಟ್ಟಿದ್ದೇವೆ.

ಶ್ರೀ ಎಂ. ರಘುಪತಿ.—ತಾವು ಗಾಳಿಯನ್ನು ಕೂಡ ಕೊಟ್ಟಿರಬಹುದಲ್ಲವೆ ?

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಮೊಯ್ಲಿಯವರು ಈ ಮಾತನ್ನು ಹೇಳಿದ್ದರಿಂದ, ಮಾನ್ಯ ಮುಖ್ಯಮಂತ್ರಿಗಳು ಅವರಿಗೆ ಪದ್ಮವಿಭೂಷಣ ಎಂಬ ಪದಕವನ್ನು ಕೊಡುವುದಕ್ಕೆ ಶಿಫಾರಸ್ ಮಾಡ ಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಒಂದು ವೇಳೆ ರೈತರು ಚಳುವಳಿಯನ್ನು ಮಾಡಿದಾಗ ಬೇರೆ ಬೇರೆ ರೀತಿಯ ಮಾರ್ಗಗಳು ಇವೆ. ಅದು ಬಿಟ್ಟು ಲಾಠಿ ಚಾರ್ಜ್ ಮಾಡುವುದಿಲ್ಲ. ಆದ್ದರಿಂದ ನಾನು ಮಾನ್ಯ ವೀರಪ್ಪಮೊಯ್ಲಿಯವರಿಗೆ ಒಂದು ಮಾತನ್ನು ಈ ಸಂದರ್ಭದಲ್ಲಿ ಹೇಳಂತ್ತೇನೆ. ಅದುವಿನೆಂದರೆ ಒಬ್ಬ ವ್ಯಕ್ತಿಯನ್ನು ಗುಂಡುಹಾಕಿ ಕೊಂದರೆ ಅವರ ಕುಟುಂಬಕ್ಕೆ ಸುಮಾರು ೫ ಸಾವಿರ ರೂಪಾಯಿಗಳ ಕಿಮ್ಮತ್ತು ಕೊಟ್ಟರೆ ಕಳೆದುಕೊಂಡ ತನ್ನ ಗಂಡನನ್ನು ಕೊಡುವುದಕ್ಕೆ ಸಾಧ್ಯವಿದೆಯೇ ? ಇಲ್ಲ, ಕಳೆದು ಕೊಂಡ ತಂದೆಯನ್ನು ಮಕ್ಕಳಿಗೆ ಕೊಡುವುದಕ್ಕೆ ಸಾಧ್ಯವಿದೆಯೇ ? ಅನಾಥ ಮಕ್ಕಳಿಗೆ ತಂದೆಯನ್ನು ಒಂದು ಲಕ್ಷ ರೂಪಾಯಿ ಕೊಟ್ಟರು ತಂದು ಕೊಡುವುದಕ್ಕೆ ಸಾಧ್ಯವಾಗುತ್ತದೆಯೆ ? ಇಲ್ಲ, ಕಳೆದು ಹೋದ ಪ್ರಾಣ ಮಾರ್ಕೆಟ್‌ನಲ್ಲಿ ಮಾರುವಂತಹ ವಸ್ತುವೇ ? ಆದ್ದರಿಂದ ನಾನು ಹೇಳುವುದೇನೆಂದರೆ ಪೋಲೀಸ್‌ನವರ ಪಾತ್ರ ಸಂಪೂರ್ಣವಾಗಿ ಬದಲಾವಣೆಯಾಗಬೇಕು. ಸಾರ್ವಜನಿಕರ ರಕ್ಷಣೆ ಮಾಡುವುದು ಅವರ ಕರ್ತವ್ಯ. ಮತ್ತು ಅದು ಅವರ ಧರ್ಮ, ಒಂದು ವೇಳೆ ಪರಿಸ್ಥಿತಿಯನ್ನು ಹತೋಟಿಗೆ ತರುವುದಕ್ಕೆ ಸಾಧ್ಯವಾಗದಿದ್ದಾಗ ರಬ್ಬರ್ ಅಥವಾ ಪ್ಲಾಸ್ಟಿಕ್ ಗುಂಡುಗಳು ಇರುತ್ತವೆ, ಅಂತಹ ವಸ್ತುಗಳನ್ನು ಬಳಸಬೇಕೆಂದು ಕೂಡ ನಾನು ಹೇಳಿದ್ದೇನೆ. ನಮ್ಮ ಮನೆಯಲ್ಲಿ ಯಾರಾದರೂ

ನಮ್ಮ ಮಂಗ ಅಥವಾ ಇನ್ಯಾರಾದರೂ ಸತ್ತರೆ ಅದರ ಕಷ್ಟ ಏನು ಎಂಬುದು ನಮಗೆ ಗೊತ್ತಾಗುತ್ತದೆ. ಈ ರೀತಿಯ ಒಂದು ಬದಲಾವಣೆ ಮಾಡಬೇಕೆಂಬುದೇ ಈ ನಮ್ಮ ಹೊಸ ಸರ್ಕಾರದ ನೀತಿ. ಅದು ಬಿಟ್ಟು ಸಾರ್ವಜನಿಕರಿಗೆ ರಕ್ಷಣೆ ಸಿಗಲಿಲ್ಲವೆಂದಾಗಲಿ ಅಥವಾ ಕಾನೂನು ಕಾಯ್ದೆ ಸತ್ತಿದೆಯೆಂದಾಗಲಿ ಹೇಳುವುದು ಸರಿಯಲ್ಲ. ನಾನು ಮೊನ್ನೆ ಎಲ್ಲಾ ಕಾರ್ಮಿಕ ನಾಯಕರ ಜೊತೆಯಲ್ಲಿ ಮಾತನಾಡಿದ್ದೇನೆ ಅವರ ಎದುರಿನಲ್ಲಿಯೇ ನಾನು ಸ್ಪಷ್ಟವಾಗಿ ಹೇಳಿದ್ದೇನೆ. ಯಾವುದೇ ಸಾರ್ವಜನಿಕರ ಆಸ್ತಿಪಾಸ್ತಿಯನ್ನು ನಷ್ಟ ಮಾಡಬಾರದೆಂದು ಹೇಳಿದ್ದೇನೆ. ಅದು ನಮ್ಮ ದೇಶದ ಆಸ್ತಿ. ಬಸ್ ಒಡೆದರೆ ಅದು ನಮ್ಮ ದೇಶದ ಆಸ್ತಿ. ಒಂದು ಕಟ್ಟಡವನ್ನು ಒಡೆದರೆ ಅದು ಸಾರ್ವಜನಿಕರ ಆಸ್ತಿ. ಆದ್ದರಿಂದ ಯಾವುದೇ ರೀತಿಯ ಹಿಂಸಾಚಾರವನ್ನು ಮಾಡಬಾರದೆಂದು ಕೂಡ ನಾನು ಖಡಿಸಿದ್ದೇನೆ. ಒಂದು ವೇಳೆ ಆ ರೀತಿಯಾಗಿ ಹಿಂಸಾಚಾರವೇನಾದರೂ ಆದರೆ, ಸರ್ಕಾರ ಕಣ್ಣು ಮುಚ್ಚಿಕೊಂಡು ಕುಳಿತಿರುವುದಕ್ಕೆ, ಅಥವಾ ಕೈಕಟ್ಟಿಕುಳಿತಿರುವುದಕ್ಕೆ ಸಾಧ್ಯವಾಗುವುದಿಲ್ಲ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇದು ನಮ್ಮ ಹೊಸ ಸರ್ಕಾರದ ನೀತಿ. ನಾನು ಈ ವಿಷಯವನ್ನು ಸಾರ್ವಜನಿಕರಲ್ಲಿಯೂ ಕೂಡ ಮನವಿ ಮಾಡಿಕೊಳ್ಳುತ್ತೇನೆ ಎಲ್ಲರು ಸಹಕರಿಸಬೇಕು. ಕಾಯಿದೆ ಮತ್ತು ಕಾನೂನು ಕಾಪಾಡಿಕೊಂಡು ಬರಲು ಸರ್ಕಾರ ಎಲ್ಲ ರೀತಿಯ ಕ್ರಮ ಕೈಗೊಳ್ಳುತ್ತದೆ ಎನ್ನುವ ಭರವಸೆಯನ್ನು ನಾನು ಈ ಸಭೆಗೆ ಕೊಡಬಯಸುತ್ತೇನೆ.

ಅಧ್ಯಕ್ಷರು.—ಮಾನ್ಯ ಮುಖ್ಯಮಂತ್ರಿಗಳು ವಿವರವಾದಂಥ ಉತ್ತರ ಕೊಟ್ಟಿರುವುದರಿಂದ ಇನ್ನು ಮುಂದಿನ ವಿಷಯಕ್ಕೆ ಹೋಗೋಣ.

ಶ್ರೀ ಎಂ. ವೀರಪ್ಪಮೊಯ್ಲಿ.—ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುವಾಗ ಅಲ್ಲಿ ಗಲಾಟೆ ಮಾಡಿಸಲು ನಮ್ಮ ಪಕ್ಷಕ್ಕೆ ಸೇರಿದವರನ್ನು ಕರೆದುಕೊಂಡು ಹೋಗಿದ್ದರೆಂದು ಹೇಳಿದ್ದು ಸರಿಯಲ್ಲ. ಇದನ್ನು ಸರಿಯಾಗಿ ವಿಚಾರ ಮಾಡಿಸದೆ ಈ ರೀತಿ ಇಲ್ಲಿ ಹೇಳುವುದು ಸರಿಯಲ್ಲ. ಮತ್ತೊಂದು ಗಹನವಾದ ವಿಚಾರವೆಂದರೆ, ಅಲ್ಲಿ ಡಿ.ಐ.ಜಿ. ಮುಂತಾದ ಉನ್ನತ ಅಧಿಕಾರಿಗಳ ಸಮಕ್ಷಮದಲ್ಲಿ ಈ ಗಲಾಟೆ ನಡೆದಿದ್ದರೂ ಕೂಡ ಅವರುಗಳು ಅದನ್ನು ತಡೆಯಲು ಏನೂ ಪ್ರಯತ್ನ ಮಾಡಲಿಲ್ಲ ಎಂಬ ವಿಚಾರವನ್ನು ನಾನು ಪ್ರಸ್ತಾಪ ಮಾಡಿದ್ದೆ. ಇದಕ್ಕೆ ಉತ್ತರ ಬರಲಿಲ್ಲ. ಆದ್ದರಿಂದ ಈ ಘಟನೆಯ ಬಗ್ಗೆ ಇನ್ನೊಮ್ಮೆ ತನಿಖೆ ಮಾಡಿಸಬೇಕೆಂದು ಹೇಳುತ್ತೇನೆ.

ಶ್ರೀ ವೈ. ರಾಮಕೃಷ್ಣ.—ತಾವು ಮುಂದಿನ ವಿಷಯಕ್ಕೆ ಹೋಗುವುದಕ್ಕೆ ಮೊದಲು ನಾನು ತಮಗೆ ಕಳುಹಿಸಿರುವ ನಿಲುವಳಿ ಸೂಚನೆ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡಲು ಅವಕಾಶ ಕೊಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ತಮ್ಮ ನಿಲುವಳಿ ಸೂಚನೆಯನ್ನು ನಾನು ನೋಡಿದ್ದೇನೆ. ಅದು ನೆನ್ನೆಯ ದಿವಸಕ್ಕೆ ಸಂಬಂಧಪಟ್ಟಿದ್ದಾಗಿದೆ. ನಿಯಮಾವಳಿಯ ಪ್ರಕಾರ ನೆನ್ನೆಗೆ ಸಂಬಂಧಪಟ್ಟಿದ್ದನ್ನು ಈ ದಿವಸ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ. ಆದರೂ ಇದರ ಬಗ್ಗೆ ಸಮಂಜಸವಾದಂಥ ಮಾಹಿತಿ ಸರ್ಕಾರದಲ್ಲಿದ್ದರೆ ಅದನ್ನು ತರಿಸಲು ವ್ಯವಸ್ಥೆ ಮಾಡೋಣ.

ಶ್ರೀ ವೈ. ರಾಮಕೃಷ್ಣ.—ನಾನು ನಿಯಮಾವಳಿಯ ಪ್ರಕಾರವೇ ಈ ನಿಲುವಳಿ ಸೂಚನೆಯ ಒಂದು ಕಾಪಿಯನ್ನು ತಮಗೆ, ಕೇಂದ್ರಿಗೂ, ಇನ್ನೊಂದು ಕಾಪಿಯನ್ನು ತಮಗೂ ಮತ್ತೊಂದು ಕಾಪಿಯನ್ನು ಸಂಬಂಧಪಟ್ಟ ಮಂತ್ರಿಗಳಿಗೂ ಕಳುಹಿಸಿಕೊಟ್ಟಿದ್ದೇನೆ. ಇದೇನೂ ಸಾಮಾನ್ಯ ವಿಚಾರವಲ್ಲ. ಇದು ಮಾನವೀಯತೆಯ ಪ್ರಶ್ನೆ ಆಗಿದೆ. ನೂರಾರು ಸಂಸಾರಗಳು ವಾಸವಾಗಿದ್ದ ಕಡೆಯಲ್ಲಿ ಅವರ ವಾಸದ ಮನೆಗಳನ್ನು ಒಡೆದು ಹಾಕಿರುವಂತಹದ್ದನ್ನು ಲಘುವಾಗಿ ತಾಳುವುದಕ್ಕಾಗುವುದಿಲ್ಲ. ಇಂತಹ ವಿಚಾರದ ಬಗ್ಗೆ ನಾನು ಕಾನೂನುಬದ್ಧವಾಗಿ ಮತ್ತು ನಿಯಮಾವಳಿಯ ಪ್ರಕಾರ ನೋಟೀಸ್ ಕೊಟ್ಟಿದ್ದರೂ ಸಹ ತಾವು ಇದನ್ನು ಇಲ್ಲಿ ಪ್ರಸ್ತಾಪ ಮಾಡಲು ಅವಕಾಶ ಕೊಡದಿದ್ದರೆ ಹೇಗೆ ?

ಅಧ್ಯಕ್ಷರು.—ತಮ್ಮ ನೋಟೀಸ್ ನಿಯಮದ ವ್ಯಾಪ್ತಿಯಲ್ಲಿ ಇಲ್ಲವೆಂದು ನಾನು ಹೇಳುವುದಿಲ್ಲ. ಆದರೆ ತಾವು ನೆನ್ನೆಯ ತಾರೀಖಿಗೆ ಕೊಟ್ಟಿದ್ದನ್ನು ಈ ದಿನ ತೆಗೆದುಕೊಳ್ಳುವುದು ಸರಿಯೇ ?

ಶ್ರೀ ಆರ್. ಎಲ್. ಜಾಲಪ್ಪ.—ಈಗ ಸಭೆಯ ಮುಂದೆ ಇಲ್ಲದಿರುವ ವಿಚಾರದ ಬಗ್ಗೆ ಮಾನ್ಯ ಸದಸ್ಯರು ಮಾತನಾಡುವುದು ಸರಿಯೇ ?

ಶ್ರೀ ವೈ. ರಾಮಕೃಷ್ಣ.—ನಿಯಮಾವಳಿ ಪ್ರಕಾರ ನಾನು ನೋಟೀಸ್ ಕೊಟ್ಟಿದ್ದೇನೆ. ವಿನಾ ಕಾರಣ ಅಲ್ಲಿ ಸಾವಿರಾರು ಮನೆಗಳನ್ನು ಒಡೆಮು ಹಾಕುತ್ತಿರುವುದು ಸರಿಯಲ್ಲ. ಇದರ ಬಗ್ಗೆ ಪ್ರಸ್ತಾಪ ಮಾಡಲು ತಾವು ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು.—ತಾವು ಈ ಮೊದಲು ಸಂಸದೀಯ ವ್ಯವಹಾರಗಳ ಮಂತ್ರಿಯಾಗಿದ್ದವರು ; ಆದ್ದರಿಂದ ನಾನು ತಮಗೆ ಹೆಚ್ಚು ಹೇಳುವುದು ಸರಿಯಲ್ಲ. ನೆನ್ನೆಯ ದಿವಸಕ್ಕೆ ಕೊಟ್ಟ ನಿಲುವಳಿ ಸೂಚನೆಯನ್ನು ಈ ದಿವಸ ತೆಗೆದು ಕೊಳ್ಳಲು ಯಾವ ರೀತಿ ಸಾಧ್ಯವಾಗುತ್ತದೆ ?

ಶ್ರೀ ವೈ. ರಾಮಕೃಷ್ಣ.—ನಾನು ಸಕಾಲದಲ್ಲಿ ನೋಟೀಸ್ ಕೊಟ್ಟಿರುವುದರಿಂದ ತಾವು ಏತಕ್ಕೆ ಒಪ್ಪಿಗೆ ಕೊಡಬಾರದು ?

MR. SPEAKER.—May I bring to your kind notice Rule 61 ? "Notice of Adjournment Motion shall be given before the commencement of the sitting of the day on which the motion is proposed to be taken..."

'On the day' that is exactly what I have said. You have given notice for yesterday. That cannot be taken up for today. It was addressed and dated for yesterday, not for to-day. Therefore, I have said the Adjournment Motion is not before me to-day. I would appeal to the Member, if any information could be gathered from the Government, certainly I will try to give.

ಶ್ರೀ ವೈ. ರಾಮಕೃಷ್ಣ.—ಇಂತಹ ಗಂಭೀರ ವಿಷಯವನ್ನು ಇಲ್ಲಿ ಚರ್ಚೆ ಮಾಡಬಾರದೆಂದು ನಿಯಮದಲ್ಲಿ ಏನೂ ಹೇಳಿಲ್ಲ.

ಅಧ್ಯಕ್ಷರು.—ನಾನು ವಿಷಯದ ಬಗ್ಗೆ ಹೇಳಲಿಲ್ಲ. ಆದರೆ ಇವೊತ್ತಿನ ಪರಿಸ್ಥಿತಿ ಮತ್ತು ನನಗಿರುವ ಕಷ್ಟವನ್ನು ತಮಗೆ ಹೇಳಿದೆ. ನೆನ್ನೆ ದಿವಸಕ್ಕೆ ಕಳುಹಿಸಿದ ನಿಲುವಳಿ ಸೂಚನೆ ಈ ದಿವಸ ಚರ್ಚೆ ಮಾಡಲು ಬರುವುದಿಲ್ಲ. ಇದರ ಜೊತೆಗೆ ತಾವು ಕೊಟ್ಟ ನೋಟೀಸ್ ಈಗ ನನ್ನ ಮುಂದೆ ಇಲ್ಲ.

ಶ್ರೀ ವೈ. ರಾಮಕೃಷ್ಣ.—ಇದು ಪಕ್ಷಾತೀತವಾದ ವಿಚಾರ. ಆದ್ದರಿಂದ ಇದನ್ನು ತಾವು ಅಷ್ಟು ಸುಲಭವಾಗಿ ತಳ್ಳಿಹಾಕುವುದು ಸರಿಯಲ್ಲ. Please permit me. Please bear with me for a minute.

MR. SPEAKER.—Notice is not before me. I cannot allow a Member to discuss.

ಶ್ರೀ ವೈ. ರಾಮಕೃಷ್ಣ.—ನೆನ್ನೆ ದಿವಸ ರಾಜ್ಯಪಾಲರ ಭಾಷಣ ಮುಗಿದ ನಂತರ ಮತ್ತೆ ಸಭೆ ಸೇರಿತ್ತು. ಆಗ ನಾನೂ ಸಹ ಹಾಜರಿದ್ದೆ. ಆದರೆ ತಾವು ನನ್ನ ನಿಲುವಳಿ ಸೂಚನೆಯನ್ನು ತೆಗೆದು ಕೊಳ್ಳಲಿಲ್ಲ. ಈ ದಿನವಾದರೂ ತಾವು ಇದನ್ನು ಪ್ರಸ್ತಾಪ ಮಾಡಲು ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು.—ಈಗ ನಮ್ಮ ಮುಂದೆ ಎರಡು ಗಮನ ಸೆಳೆಯುವ ಸೂಚನೆಗಳಿವೆ. ಅವುಗಳನ್ನು ಮುಗಿಸಿದ ಮೇಲೆ ತಮ್ಮ ನೋಟೀಸ್ ಬಗ್ಗೆ ಸರ್ಕಾರ ಏನಾದರೂ ಹೇಳುವುದಿದ್ದರೆ ಹೇಳಲಿ.

ಶ್ರೀ ಎಸ್. ಎಂ. ಕೃಷ್ಣನ್.—ತಾವು ರೂಲ್ ಓದಿ ಹೇಳಿದ್ದೀರಿ. ನೆನ್ನೆ ದಿವಸ ಕೊಟ್ಟ ನೋಟೀಸನ್ನು ಈ ದಿವಸ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲವೆಂದು ತಾವು ರೂಲಿಂಗ್ ಕೊಟ್ಟಮೇಲೂ ಸಹ ಅದೇ ವಿಚಾರದಲ್ಲಿ ಈ ಮೊದಲು ಪಾರ್ಲಿಮೆಂಟರಿ ಮಿನಿಸ್ಟರ್ ಆಗಿದ್ದವರು ವ್ಯಾಖ್ಯಾನ ಮಾಡುತ್ತಾ ಹೋಗುವುದು ಸರಿಯಲ್ಲ.

ಶ್ರೀ ವೈ. ರಾಮಕೃಷ್ಣ.—ಇದು ರೂಲ್ ವಿಚಾರವಲ್ಲ. ಇದು ಗುಡಿಸಲು ನಿವಾಸಿಗಳ ವಿಚಾರವಾಗಿದೆ.

ಶ್ರೀ ಎಂ. ರಘುಪತಿ.—ಈ ಜನರ ಬಗ್ಗೆ ಈಗ ತಮಗೆ ಕಳಕಳಿ ಬಂದಿದೆ. ಈ ಮೊದಲು ಈ ಕಳಕಳಿ ಇರಲಿಲ್ಲ.

SRI Y. RAMAKRISHNA.—Yesterday I was ready and to-day I have taken the earliest opportunity in requesting you to allow me,

ಅಧ್ಯಕ್ಷರು.— ನಾನು ಮೊದಲೇ ಹೇಳಿದಂತೆ ಆ ವಿಚಾರ ಈಗ ನಮ್ಮ ಮುಂದಿಲ್ಲ.

ಶ್ರೀ ವೈ. ರಾಮಕೃಷ್ಣ.—ಮಡಿವಾಳದಲ್ಲಿ ಒಂದು ಸಾವಿರ ಕುಟುಂಬಗಳ ಪರಿಸ್ಥಿತಿ ಏನಾಗಿದೆ ಎಂಬುದನ್ನು ನಾನು ಹೇಳಬೇಕಾಗಿದೆ. ಅಲ್ಲಿ ಈಗಲೂ ಬಡವರ ಮನೆಗಳನ್ನು ಒಡೆದುಹಾಕುತ್ತಿದ್ದಾರೆ. ಇದನ್ನು ಮೊದಲು ನಿಲ್ಲಿಸಬೇಕು ಏಕೆಂದರೆ, ಆ ಜನರು ಅಲ್ಲಿ ಕಳೆದ ೨೦ ವರ್ಷಗಳಿಂದ ವಾಸವಾಗಿದ್ದಾರೆ. ಅವರ ವಾಸದ ಮನೆಗಳಿಗೆ ಮುನಿಸಿಪಾಲಿಟಿಯವರು ಮನೆ ನಂಬರ್ ಕೊಟ್ಟಿದ್ದಾರೆ. ಅವರು ರೇಷನ್ ಕಾರ್ಡ್‌ಗಳ ಮೂಲಕ ರೇಷನ್ ಪಡೆಯುತ್ತಿದ್ದಾರೆ ಮತ್ತು ಮೊನ್ನೆ ನಡೆದ ಚುನಾವಣೆಯಲ್ಲಿ ಓಟ್ ಮಾಡಿದ್ದಾರೆ. ಇಂತಹವರ ವಾಸದ ಮನೆಗಳನ್ನು ಒಡೆದುಹಾಕುವುದು ಸರಿಯೇ ? ಬೇಕಾದರೆ ಹೊಸದಾಗಿ ಬರುವಂತಹ ಸ್ಲಮ್‌ಗಳನ್ನು ತಡೆಗಟ್ಟಿ. ಆದರೆ ಮೊದಲಿನಿಂದಲೂ ವಾಸವಾಗಿರುವಂತಹ ಜನರಿಗೆ ತಾವು ರಕ್ಷಣೆ ಕೊಡಬೇಕು.

MR. SPEAKER.—That is not before me.

(INTERRUPTION)

ಒಬ್ಬ ಮಾನ್ಯ ಸದಸ್ಯರು.—ಒಂದು ಸಾರಿ ಮಾನ್ಯ ಅಧ್ಯಕ್ಷರು ರೂಲಿಂಗ್ ಕೊಟ್ಟ ಮೇಲೆ ಪುನಃ ಅದರ ಮೇಲೆ ಮಾತನಾಡುವುದು ಸರಿಯೆ ?

MR. SPEAKER.—I am on my legs. Please resume your seat. ಶ್ರೀ ರಾಮಕೃಷ್ಣರವರು ಈ ಮನೆಯ ಅತ್ಯಂತ ಹಿರಿಯ ಸದಸ್ಯರು, ಸಂಸದೀಯ ವ್ಯವಹಾರ ಖಾತೆಯ ಮಂತ್ರಿಯಾಗಿದ್ದವರು. ಈ ಸಭೆಗೆ ಮಾರ್ಗದರ್ಶನ ಮಾಡತಕ್ಕಂಥವರು. ಅವರಲ್ಲಿ ನಾನು ಮನವಿ ಮಾಡಿಕೊಳ್ಳುತ್ತೇನೆ. ಅವರು ಕಳಿಸಿದಂತಹ ನಿಲುವಳಿ ಸೂಚನೆಯಲ್ಲಿನ ಗಂಭೀರತೆಯನ್ನು ನಾನು ಅರ್ಥಮಾಡಿಕೊಳ್ಳುತ್ತೇನೆ. ಆದರಲ್ಲೂ ಅವರು ಹಾಕಿರತಕ್ಕಂಥ ವಿಧಿ ವಿಧಾನಗಳ ವ್ಯಾಪ್ತಿಯೊಳಗೆ ನಾನು ಕೆಲಸ ಮಾಡಬೇಕಾಗುತ್ತದೆ. ಈ ನಿಯಮಗಳು ಓರಿನೇ ವಿಧಿಯಲ್ಲಿರುವಂತೆ ನಾನು ಇದನ್ನು ಈ ದಿವಸ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ. ಆದರೂ ಸರ್ಕಾರದಿಂದ ಇದರ ಬಗ್ಗೆ ಮಾಹಿತಿ ಏನಾದರೂ ಇದ್ದರೆ ತರಿಸಲಿಕ್ಕೆ ಪ್ರಯತ್ನ ಮಾಡುತ್ತೇನೆ. ಈಗ ಮುಂದಿನ ಗಮನ ಸೆಳೆಯುವ ಸೂಚನೆಯನ್ನು ತೆಗೆದುಕೊಳ್ಳೋಣ.

ಶ್ರೀ ವೈ. ರಾಮಕೃಷ್ಣ.—ಮಾನ್ಯ ಅಧ್ಯಕ್ಷರಲ್ಲಿ ಒಂದು ಕೋರಿಕೆ. ಸರ್ಕಾರದ ಪರವಾಗಿ ಮಾನ್ಯ ಮುಖ್ಯಮಂತ್ರಿಗಳು ಏನಾದರೂ ಹೇಳುವುದಿದ್ದರೆ ಹೇಳಲಿ. We are prepared to hear at least.

ಶ್ರೀ ರಾಮಕೃಷ್ಣ ಹೆಗ್ಡೆ.—ಆಕಸ್ಮಾತ್ತಾಗಿ ಯಾವುದೇ ವಿಚಾರವನ್ನಾಗಲೀ ಹೀಗೆ ಎತ್ತಿದರೆ ತಕ್ಷಣ ಸರ್ಕಾರದ ಪರವಾಗಿ ಉತ್ತರ ಹೇಳುವುದು ಕಷ್ಟವಾಗುತ್ತದೆ. It was not admitted. I can get a copy from you. But I must get a copy from the Honble Speaker.

ಶ್ರೀ ವೈ. ರಾಮಕೃಷ್ಣ.—ತಾವು ಇದನ್ನು ಗಮನಿಸಬೇಕು. ಹೊಸ ನಿಯಮಾವಳಿ ಪ್ರಕಾರ ಈಗ ಮೂರು ಪ್ರತಿಕೆಗಳನ್ನು ಮಾಡಿ ಒಂದನ್ನು ಸ್ಪೀಕರ್‌ರವರಿಗೂ, ಒಂದನ್ನು ಸೆಕ್ರೆಟರಿಯವರಿಗೂ ಮತ್ತೊಂದನ್ನು ಸಂಬಂಧಪಟ್ಟ ಸಚಿವರಿಗೆ ಕೊಡತಕ್ಕಂಥ ಜವಾಬ್ದಾರಿ ಸದಸ್ಯರ ಮೇಲಿರುತ್ತದೆ. ಅದರಂತೆ ನಾನು ಕಳಿಸಿಕೊಟ್ಟಿದ್ದೇನೆ. ಒಂದು ವೇಳೆ ಈಗ ತಮ್ಮ ಹತ್ತಿರ ಇದರ ಬಗ್ಗೆ ವಿಷಯವೇನಾದರೂ ಇದ್ದರೆ ಅದನ್ನು ತಿಳಿಸಿದರೆ ಸ್ವೀಕರಿಸುತ್ತೇನೆ.

ಶ್ರೀ ರಾಮಕೃಷ್ಣ ಹೆಗ್ಡೆ.—ತಾವು ಕಳಿಸಿದ್ದೀರಿ ನಿಜ. ಆದರೆ ಆದು ಈವತ್ತೇ ಬರುತ್ತದೆಂದು ಗೊತ್ತಾಗಬೇಕಲ್ಲ? ಈ ವಿಚಾರದಲ್ಲಿ ತಕ್ಷಣವಾಗಿ ನಾನು ಏನೂ ಉತ್ತರ ಹೇಳುವುದಿಲ್ಲ. ನೀವು ನನ್ನ ಗಮನ ಸೆಳೆದಿದ್ದೀರಿ, ಅಲ್ಲಿ ಏನು ಆಗಿದೆ, ಆ ಬಗ್ಗೆ ಯಾವ ಕ್ರಮ ತೆಗೆದುಕೊಳ್ಳಬೇಕೆಂದು ನಾನು ನೋಡುತ್ತೇನೆ.

ಅಧ್ಯಕ್ಷರು.—ಆಯಿತು. ಈಗ ಮುಂದಿನ ಗಮನ ಸೆಳೆಯುವ ಸೂಚನೆಯನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಕೆ. ರಾಮಭಟ್.—ಅಧ್ಯಕ್ಷರೇ, ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಬೆಳ್ತಂಗಡಿ ಯಲ್ಲಿ ಮಂಗನ ಕಾಯಿಲೆ ಬಗ್ಗೆ ಸರ್ಕಾರ ಸಾಕಷ್ಟು ಕೆಲಸ ಮಾಡಿಲ್ಲ. ಅಲ್ಲಿ ಪರಿಹಾರ ಕೆಲಸವನ್ನು ಕೂಡಲೇ ಮಾಡಬೇಕು. ಈಗಾಗಲೇ ಅಲ್ಲಿ ೫೫ ಜನರು ಸತ್ತಿದ್ದಾರೆ. ನಿಮ್ಮ ಅಧಿಕೃತ ವರದಿ ಪ್ರಕಾರ ೧೪ ಜನ ಸತ್ತಿದ್ದಾರೆ ಅಂತಾ ಇದೆ. ಶ್ರೀ ಬಂಗೇರಾ ಅವರು ಆ ಕ್ಷೇತ್ರದಿಂದ ಬಂದಿದ್ದಾರೆ. ಮಂಗನ ಕಾಯಿಲೆ ನಿವಾರಣೆಗೆ ಕೂಡಲೇ ಸೂಕ್ತಕ್ರಮ ತೆಗೆದುಕೊಳ್ಳಬೇಕೆಂದು ನಾನು ಮಾನ್ಯ ಮುಖ್ಯಮಂತ್ರಿ ಯವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ.

MR. SPEAKER.—Any how, the hon. Member has drawn the attention of the Government.

ಶ್ರೀ ಎಂ. ವೀರಪ್ಪಮೊಯಿಲಿ.—ಸರ್ಕಾರದಲ್ಲಿ ಇದರ ಬಗ್ಗೆ ಏನಾದರೂ ಮಾಹಿತಿ ಇದ್ದರೆ ಹೇಳಿಕೆ ಕೊಡಲಿ. Unfortunately while submitting, the hon. Chief Minister was not hearing. He was attending to some other work.

SRI RAMAKRISHNA HEGDE.—I am sorry. nothing will go unheard so far as I am concerned. ಮಾನ್ಯ ಸಭಾಪತಿಗಳೇ, ಈ ವಿಚಾರದ ಬಗ್ಗೆ ಶ್ರೀ ಬಂಗೇರಾ ಅವರು ಮತ್ತು ಶ್ರೀ ರಾಮಭಟ್ ಅವರು ನನ್ನ ಗಮನವನ್ನು ಈಗಾಗಲೇ ಸೆಳೆದಿದ್ದಾರೆ. ಶ್ರೀ ಬಂಗೇರಾ ಅವರು ಟೆಲಿಗ್ರಾಂ ಕೂಡ ಕಳಿಸಿಕೊಟ್ಟಿದ್ದರು. ಆರೋಗ್ಯ ಇಲಾಖೆಯ ನಿರ್ದೇಶಕರು ಆ ಸಂದರ್ಭದಲ್ಲಿ ಇಲ್ಲಿ ಇರಲಿಲ್ಲ. ನಮ್ಮ ಸ್ಕೀಮನ್ನು ಅಪ್ರೂವ್ ಮಾಡಿಸಲು ಅವರು ಡೆಲ್ಲಿಗೆ ಹೋಗಬೇಕಾದ ಪ್ರಸಂಗ ಬಂದಿತ್ತು. ಜಂಟಿ ನಿರ್ದೇಶಕರನ್ನು ನಾನು ತಕ್ಷಣ ಕಳಿಸಿದ್ದೇನೆ. ಮತ್ತು ಸರ್ಕಾರದಿಂದ ಲಭ್ಯವಿರತಕ್ಕಂಥ ಎಲ್ಲಾ ಸವಲತ್ತುಗಳನ್ನು ಪೂರೈಸುವ ವ್ಯವಸ್ಥೆ ಮಾಡಬೇಕೆಂದು ಆಜ್ಞೆ ಮಾಡಿದ್ದೇನೆ. ಇನ್ನೇನಾದರೂ ಹೆಚ್ಚು ಸಹಾಯ ಮಾಡುವ ಅಗತ್ಯತೆ ಕಂಡುಬಂದರೆ ಮಾಡಂತ್ತೇನೆ.

ಶ್ರೀ ಎಂ. ವೀರಪ್ಪಮೊಯ್ಲಿ.—ನಮ್ಮ ತಿಳುವಳಿಕೆ ಪ್ರಕಾರ ಅಲ್ಲಿ ಯಾವ ಕಾರ್ಯಕ್ರಮವನ್ನೂ ತೆಗೆದುಕೊಂಡಂತಿಲ್ಲ. ಈಗಲಾದರೂ ತಕ್ಷಣವಾಗಿ ಮಾನ್ಯ ಮುಖ್ಯಮಂತ್ರಿಗಳು ಆ ಬಗ್ಗೆ ಅಗತ್ಯವಾದ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತಿದ್ದೇನೆ.

ಶ್ರೀ ಜೆ.ಹೆಚ್. ಪಟೇಲ್.—ಮಾನ್ಯ ವಿರೋಧ ಪಕ್ಷದ ಸದಸ್ಯರ ವರ್ತನೆಯನ್ನು ನೋಡಿದರೆ ಬೆಳ್ತಂಗಡಿಯ ಮಂಗನ ಕಾಯಿಲೆ ಇಲ್ಲಿಯೂ ಬಂದಿರುವಂತೆ ಕಾಣುತ್ತದೆ.

ಅಧ್ಯಕ್ಷರು.—ಈಗ ಮುಂದಿನ ಕಾರ್ಯಕಲಾಪಗಳಿಗೆ ಹೋಗೋಣ.